# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:200 • ನೋಂದಣಿ ನಂ.:KARKAN27911 • ವಿಜಯನಗರ • 03.01.2024 • ಬುಧವಾರ • ಪುಟ:04 • ಬೆಲೆ:2
Volume:01 • Issue:200 • Reg.No:KARKAN27911 • VIJAYANAGARA • 03.01.2024 • Wednesday • Page:04 • Rs:2







# ನುಡಿದಂತೆ ನಡೆಯದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ

## ಸರ್ಕಾರಕ್ಕೆ ಗಡುವು ನೀಡಿದ ಶ್ರೀಜಯ ಮೃತ್ಯುಂಜಯ ಸ್ವಾಮೀಜಿ | 2ಎ ಮೀಸಲಾತಿ ಒತ್ತಾಯಿಸಿ ಹೆದ್ದಾರಿಗಳಲ್ಲಿ ಲಿಂಗಪೂಜೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಂಚಮಸಾಲಿ ಸಮುದಯಕ್ಕೆ 2ಎ ಮೀಸಲಾತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಪಂಚಮಸಾಲಿ ಸಮಾಜದ ಕೂಡಲಸಂಗಮ ಪೀಠಾಧೀಶ್ವರರಾದ ಶ್ರೀಜಯ ಮೃತ್ಯುಂಜಯ ಸ್ವಾಮೀಜಿ ಜ.20ರ ಗಡುವು ನೀಡಿ ಗುಡುಗಿದ ಪ್ರಸಂಗ ಜರುಗಿತು.

ತಾಲೂಕಿನ ವಟ್ಟಮ್ಮನಹಳ್ಳಿಯಲ್ಲಿ ಸೋಮವಾರ ರಾತ್ರಿ ಗ್ರಾಮಸ್ಥರು, ದೈವಸ್ಥರು ಮತ್ತು ಯುವಕರಿಂದ ಹಮ್ಮಿಕೊಂಡಿದ್ದ ಶ್ರೀಬಸವೇಶ್ವರ ಸ್ವಾಮಿ ಕಾರ್ತಿಕೋತ್ಸವಕ್ಕೆ ಚಾಲನೆ ನೀಡಿ, ಬಳಿಕ ಧಾರ್ಮಿಕ ಸಭೆಯ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು. ಈ ಮೀಸಲಾತಿ ಹೋರಾಟ ನಡೆಯುತ್ತಲೇ ಇದೆ, ಗುರಿ ಮುಟ್ಟುವವರೆಗೂ ನಮ್ಮ ಸಮಾಜದ ಮಕ್ಕಳ ಕೈಗೆ ಸಂದೇಶ ಪತ್ರ ಸಿಗುವವರೆಗೂ ಹೋರಾಟ ಮಾಡುತ್ತಲೇ ಇರುತ್ತೇವೆ. ನಮ್ಮ ಬೇಡಿಕೆ ಮಾತ್ರ ಈಡೇರಿಸದೆ, ಒಳ ಮೀಸಲಾತಿ ಹೋರಾಟಕ್ಕೆ ಮುಂದಾಗಿರುವ ಎಲ್ಲಾ ಸಮಾಜದವರ ಬೇಡಿಕೆಗಳು ಈಡೇರಿಸಬೇಕು ಎನ್ನುವುದು ನಮ್ಮ ಒತ್ತಾಯ. ನಾವು ನಿಮಗೆ ಬೆಂಬಲ ನೀಡುತ್ತೇವೆ ನಮ್ಮ ಹೋರಾಟಕ್ಕೂ ನಿಮ್ಮ ಬೆಂಬಲ ಪಡೆಯುವಲ್ಲಿ ವಿಫಲರಾಗುತ್ತಿದ್ದೇವೆ. ನಮ್ಮ ಹೋರಾಟಕ್ಕೆ ಕೈ ಜೋಡಿಸಿ ಎಂದು ಎಲ್ಲಾ ಸಮುದಾಯಗಳಿಗೂ ಕಿವಿಮಾತು ಹೇಳಿದರು.

ಕಳೆದ ಸರ್ಕಾರದ ಮುಖ್ಯಮಂತ್ರಿ ಇನ್ನೇನು ಬೇಡಿಕೆ ಈಡೇರಿಸುತ್ತೇವೆ ಎಂದು ಹೇಳುತ್ತಲೇ ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ, ನಮ್ಮ ಸಮುದಾಯದವರು ನಿಮ್ಮನ್ನು ಬೆಂಬಲಿಸಿದ್ದಾರೆ. ಆದ್ದರಿಂದ ನಿಮಗೂ ಇದೇ ಮಾತು ಹೇಳುತ್ತೇವೆ. ನೀವೇ ನೀಡಿದ ಒಂದು ವಾರದ ಗಡುವು ಮುಗಿದಿದೆ. ಇನ್ನೂ ಕಾಯುವ ಸ್ಥಿತಿಯಲ್ಲಿ ನಾವಿಲ್ಲ. ಆದರೂ ಜ.20ರವರೆಗೂ ಗಡುವು ನೀಡುತ್ತೇವೆ. ರಾಜ್ಯ ಹೆದ್ದಾರಿಗಳಲ್ಲಿ ಲಿಂಗಪೂಜೆ ಮಾಡುವ ಮೂಲಕ ಸರ್ಕಾರದ ಹಾಗೂ ಸಮಾಜದ ಗಮನ ಸೆಳೆಯುತ್ತೇವೆ ಎಂದರು. ಎಚ್ಚೆತ್ತುಕೊಳ್ಳದಿದ್ದರೆ ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆ ಎಂದು ರಾಜ್ಯ ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿಗೆ ಎಚ್ಚರಿಕೆಯ ಗಂಟೆ ಬಾರಿಸಿದರು.



ಇದಕ್ಕೂ ಮೊದಲು ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಮಾತನಾಡಿ, 2ಎ ಮೀಸಲಾತಿ ನೀಡುವಲ್ಲಿ ಸರ್ಕಾರಗಳು ಮಾತು ತಪ್ಪುತ್ತಿವೆ ಎಂದು ಆರೋಪಿಸಿದರು. ನಾವು ಬೇರೆಯವರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿಲ್ಲ. ನ್ಯಾಯಯುತವಾದ ಬೇಡಿಕೆ ಈಡೇರಿಸುವಂತೆ ಕೇಳುತ್ತಿದ್ದೇವೆ. ನಮ್ಮ ಸಮಾಜದ ಮಕ್ಕಳಿಗೆ ಸರ್ಕಾರಿ ಸೌಲಭ್ಯಗಳು, ಶಿಕ್ಷಣಕ್ಕೆ ಹಾಗೂ ನೌಕರಿಗೆ ಅನುಕೂಲವಾಗಲು 2ಎ ಮೀಸಲಾತಿ ಅವಶ್ಯ, ಬೇಡಿಕೆ ಈಡೇರಿಸುವುದು ಸರ್ಕಾರ ಜವಬ್ದಾರಿಯಾಗಿದೆ ಪ್ರತಿಪಾದಿಸಿದರು. ಸಂಜೆ ಆರಂಭವಾಗಬೇಕಿದ್ದ ಕಾರ್ಯಕ್ರಮ ರಾತ್ರಿ 9ಕ್ಕೆ ಸ್ವಾಮೀಜಿಗಳ ಆಗಮನದ ನಂತರ, ಜ್ಯೋತಿ ಬೆಳಗಿಸಿ 29ನೇ ವರ್ಷದ ಕಾರ್ತೀಕೋತ್ಸವಕ್ಕೆ ಚಾಲನೆ ನೀಡಿದರು. ಟ್ರ್ಯಾಕ್ಟರ್‌ನಲ್ಲಿ ಪಲ್ಲಕ್ಕಿಯನ್ನೊತ್ತ ಸ್ವಾಮೀಜಿಯವರ ಮೆರವಣಿಗೆ ಗ್ರಾಮದ ಸುತ್ತ ಸಾಗಿತು.

ವೇದಿಕೆಯಲ್ಲಿ ಗ್ರಾಮದ ಉತ್ತಮ ಹಾಗೂ ಶ್ರಮಜೀವಿಯಾದ ರೈತರನ್ನು ಗುರುತಿಸಿ ಸನ್ಮಾನಿಸಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯ ವಿದ್ಯಾರ್ಥಿಗಳಿಗೂ ಸನ್ಮಾನಿಸಿದರು. ಸಮಾಜದ ನಾಮಫಲಕ ಹಾಗೂ ಗ್ರಾಮದಲ್ಲಿ ಸಮುದಾಯದ ಯುವಕರ ಪರಿಶ್ರಮದಿಂದ ನಿರ್ಮಾಣಗೊಂಡ ಪಂಚಮಸಾಲಿ ಶ್ರೇಯಾಭಿವೃದ್ಧಿ ಸೇವಾಟ್ರಸ್ಟ್ ಕಟ್ಟಡವನ್ನು ಸ್ವಾಮೀಜಿಯವರು ಉದ್ಘಾಟಿಸಿದರು.

ಈ ವೇಳೆ ಬೆಣಕಲ್ಲು ಗ್ರಾ.ಪಂ.ಅಧ್ಯಕ್ಷರಾದ ನಾಗವೇಣಿ ನಿಂಗಪ್ಪ, ಮಠದ ಸರ್ವಜ್ಞಮೂರ್ತಿ, ಗ್ರಾಮಸ್ಥರಾದ ಎ.ರೇವಪ್ಪ, ವಿ.ಎಚ್.ವೀರನಗೌಡ, ಬಣಕಾರ್ ಮಂಜುನಾಥ, ಎಚ್.ಜಾಥಪ್ಪ, ಮನೆಯಿಂದಲ ಮಲ್ಲಪ್ಪ, ಬಣಕಾರ ಕೊಟ್ರೇಶ್, ಎಚ್.ಕೊಟ್ರಗೌಡ, ಶೆಟ್ಟೆಪ್ಪನವರ ರೇವಪ್ಪ, ಬಣಕಾರ ಮಲ್ಲಿಕಾರ್ಜುನ, ಮತ್ತಿತರರು ಇದ್ದರು. ಗ್ರಾ.ಪಂ. ಮಾಜಿ ಸದಸ್ಯ ಎಚ್.ವೀರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು, ವಿದ್ಯಾರ್ಥಿನಿಯವರಿಂದ ಪ್ರಾರ್ಥನೆ ಮಾಡಿದರು. ಮುಖಂಡ ಸಿದ್ದೇಶ ಹಾಗೂ ವೀರೇಶ್ ಹಿರೆಲಿಂಗಪ್ಪನವರುನಿರ್ವಹಿಸಿದರು.

## ಮೈಕ್ರೋ ನ್ಯೂಸ್

### ಜ.3ರಂದು ಸಿರಿಧಾನ್ಯ ರೋಡ್ ಶೋ ಹೊಸಪೇಟೆಯಲ್ಲಿ

**ಹಂಪಿ ಟೈಮ್ಸ್ ಹೊಸಪೇಟೆ:**

2023–24ನೇ ಸಾಲಿನ ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳದ ಪ್ರಯುಕ್ತಕೃಷಿ ಇಲಾಖೆಯಿಂದ ಸಿರಿಧಾನ್ಯಗಳ ಕುರಿತು ಜಾಗೃತಿ ಮೂಡಿಸಲು 'ಸಿರಿಧಾನ್ಯ ರೋಡ್ ಶೋ' (ಸಿರಿಧಾನ್ಯ ನಡಿಗೆ) ಕಾರ್ಯಕ್ರಮವನ್ನು ಜ.3ರಂದು ಬೆಳಿಗ್ಗೆ 6 ಗಂಟೆಗೆ ನಗರದ ಎ.ಪಿ.ಎಂ.ಸಿ ವೃತ್ತದಿಂದ ವಿಜಯನಗರ ಕಾಲೇಜು ಮೈದಾನದವರೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಶಾಸಕರಾದ ಹೆಚ್.ಆರ್.ಗವಿಯಪ್ಪ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಚಾಲನೆ ನೀಡುವರು. ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಜಂಟಿ ಕೃಷಿ ನಿರ್ದೇಶಕ ಶರಣಪ್ಪಮುದಗಲ್ ತಿಳಿಸಿದ್ದಾರೆ.

### ಹೆದ್ದಾರಿಯಲ್ಲಿ ಗಾಂಜಾ ಮಾರಾಟ, ಇಬ್ಬರ ಬಂಧನ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:**

ಗಾಂಜಾಮಾರಾಟದಲ್ಲಿ ತೊಡಗಿದ್ದ ಹೊರರಾಜ್ಯದ ಇಬ್ಬರನ್ನು ಬಂಧಿಸಿದ ಘಟನೆ ಪಟ್ಟಣದಲ್ಲಿ ನಡೆದಿದೆ. ಪಶ್ಚಿಮಬಂಗಾಳ ಮೂಲದ ಮಹಮದ್ ಗುಲಾಂ ಹಾಗು ಉತ್ತರಪ್ರದೇಶ ಮೂಲದ ನಾಗೇಶ್ವರಪ್ರಸಾದ್ ಎನ್ನುವವರಿಬ್ಬರು ಪಟ್ಟಣದ ಹೊರವಲಯದ ರಾಷ್ಟ್ರೀಯಹೆದ್ದಾರಿಯಲ್ಲಿ ಮಾರಾಟ ಮಾಡುತ್ತಿರುವ, ಖಚಿತ ಮಾಹಿತಿ ಮೇರೆಗೆ ಪಟ್ಟಣದ ಪೊಲಿಸರು, ದಾಳಿ ನಡೆಸಿ ಬಂಧಿತರಿಂದ ಸುಮಾರು 500 ಗ್ರಾಂನಷ್ಟು ಮಾದಕ ಗಾಂಜ ಮತ್ತು 500 ರೂ.ನಗದನ್ನು ವಶಪಡಿಸಿಕೊಂಡು ಪ್ರಕರಣವನ್ನು ದಾಖಲಿಸಿ ಕೊಂಡಿದ್ದಾರೆ.

### ಆಯುಷ್ಮಾನ್ ಭವಃ ಆರೋಗ್ಯ ಮೇಳ; ಸ್ಪರ್ಶ ಜ್ಞಾನವಿಲ್ಲದ ಮಚ್ಚೆಗಳಿದ್ದರೆ ತಪ್ಪದೇ ಪರೀಕ್ಷಿಸಿಕೊಳ್ಳಿ

**ಹಂಪಿ ಟೈಮ್ಸ್ ಬಳ್ಳಾರಿ**

ಆಯುಷ್ಮಾನ್ ಭವಃ ಆರೋಗ್ಯ ಕಾರ್ಯಕ್ರಮದಡಿ ಮುಂದಿನ ಮಾರ್ಚ್–31 ರ ವರೆಗೆ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಪ್ರತಿ ಮಂಗಳವಾರದಂದು ಹಮ್ಮಿಕೊಳ್ಳುವ ಉಚಿತ ಆರೋಗ್ಯ ಮೇಳಗಳಲ್ಲಿ ಭಾಗವಹಿಸಿ, ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್‌ಬಾಬು ಅವರು ಕೋರಿದ್ದಾರೆ.

ಜಿಲ್ಲೆಯ ಎಲ್ಲಾ ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಮ್ಮ ಕ್ಲಿನಿಕ್, ಗ್ರಾಮೀಣ ಭಾಗದ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಹಮ್ಮಿಕೊಳ್ಳುವ ಆಯುಷ್ಮಾನ್ ಭವಃ ಉಚಿತ ಆರೋಗ್ಯ ಮೇಳದಲ್ಲಿ ಸ್ಪರ್ಶ ಜ್ಞಾನವಿಲ್ಲದ ತಿಳಿಬಿಳಿ ತಾಮ್ರ ವರ್ಣದ ಮಚ್ಚೆಗಳಿದ್ದರೆ ತಪ್ಪದೆ ಪರೀಕ್ಷೆ ಮಾಡಿಸಿಕೊಳ್ಳಿ, >>2

## ಒಳ ಪುಟಗಳಲ್ಲಿ


ನುಡಿದಂತೆ ನಡೆದ ಹಾಲೇಶಪ್ಪ ಮೇಷ್ಟ್ರು — ಪುಟ 2ರಲ್ಲಿ ಓದಿ

ನಾನು ಬಸವಾದಿ ಶರಣರ ಅನುಯಾಯಿ: ಸಿಎಂ ಸಿದ್ದರಾಮಯ್ಯ — ಪುಟ 2ರಲ್ಲಿ ಓದಿ

ವಿಜ್ಞಾನ ಸಂವಹನ- ಸಮ್ಮೋಹನ — ಪುಟ 3ರಲ್ಲಿ ಓದಿ


# ಡ್ರಾಪ್ ರೋಬಾಲ್‌ನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಚಾಂಪಿಯನ್




**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 2023–24ನೇ ಸಾಲಿನ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯಗಳ ಡ್ರಾಪ್ ರೋಬಾಲ್ ಪುರುಷ ಮತ್ತು ಮಹಿಳೆಯರ ಚಾಂಪಿಯನ್ಸ್ ವಿಭಾಗದಲ್ಲಿ ಪಟ್ಟಣದ ಸ.ಪ್ರ.ದ.ಕಾಲೇಜಿನ ಕ್ರೀಡಾಪಟುಗಳು ಚಾಂಪಿಯನ್ ಗಳಾಗಿದ್ದಾರೆ.

ಇದೊಂದು ವಿನೂತನ ಕ್ರೀಡೆಯಾಗಿದ್ದು ಇದರಲ್ಲಿ ಹೊಸಪೇಟೆ, ಕೊಪ್ಪಳ, ಕೂಡ್ಲಿಗಿ, ಹ.ಬೊ.ಹಳ್ಳಿ, ಹರಪನಹಳ್ಳಿ,ಹಡಗಲಿ ಸೇರಿದಂತೆ 9ಪುರುಷ, 5ಮಹಿಳಾ ತಂಡಗಳು ಈ ಟೂರ್ನಿಯಲ್ಲಿ ಭಾಗವಹಿಸಿದ್ದವು. ಇವುಗಳಲ್ಲಿ ಪಟ್ಟಣದ ಸ.ಪ್ರ.ದ.ಕಾಲೇಜ್ ಚಾಂಪಿಯನ್ ಶಿಪ್ ತನ್ನದಾಗಿಸಿ ಕೊಂಡಿದೆ. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಸೋಮಪ್ಪ ಬಡಿಗೇರ ಎರಡು ತಂಡಗಳಿಗೆ ತರಬೇತಿ ನೀಡಿದರು. ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು & ಸದಸ್ಯರು, ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿಗಳು ಎರಡೂ ತಂಡಗಳ ಕ್ರೀಡಾಪಟುಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

# ಜ.03 ರಿಂದ 10ರ ವರೆಗೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಕುರುಗೋಡು ನಗರ ಪ್ರದೇಶದಲ್ಲಿ ರಸ್ತೆ ಆಗಲೀಕರಣ ಕಾಮಗಾರಿ ಹಿನ್ನಲೆಯಲ್ಲಿ ವಿದ್ಯುತ್ ಕಂಬಗಳ ಸ್ಥಳಾಂತರ ಕಾಮಗಾರಿ ಕೈಗೊಳ್ಳಲಾಗುತ್ತಿರುವುದರಿಂದ ಕುರುಗೋಡು ನಗರ ಪ್ರದೇಶ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಜ.03 ರಿಂದ 10 ರ ವರೆಗೆ ಬೆಳಿಗ್ಗೆ 09 ಗಂಟೆಯಿಂದ ಸಂಜೆ 06 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:**

ಎಫ್–2 ಫೀಡರ್‌ನ ಗೆಣಿಕೆಹಾಳ್ ಐಪಿ ಫೀಡರ್(ಎಫ್–14 ಫೀಡರ್) ಮಾರ್ಗದ ಹೊಸ ಗೆಣಿಕೆಹಾಳ್, ಹಳೇ ಗೆಣಿಕೆಹಾಳ್ ಗ್ರಾಮಗಳು. ಎಫ್–5 ಫೀಡರ್‌ನ ಸಿಂಧಿಗೇರಿ ಐ.ಪಿ ಮಾರ್ಗದ ಬೈಲೂರು ಗ್ರಾಮ. ಎಫ್–7 ಫೀಡರ್‌ನ ಬಾದನಹಟ್ಟಿ ಐ.ಪಿ ಮಾರ್ಗದ ಬಾದನಹಟ್ಟಿ, ವದ್ದಟ್ಟಿ, ಯರ್ರಂಗಳಿ, ಸಿಂಧಿಗೇರಿ, ಮಲ್ಲೇಶ್ವರಿ ಕ್ಯಾಂಪ್. ಎಫ್–8 ಫೀಡರ್‌ನ ಎಲ್.ಐ.ಎಸ್ ಎನ್.ಜೆ.ವೈ ಮಾರ್ಗದ ಹೊಸ ಗೆಣಿಕೆಹಾಳ್, ಹಳೇ ಗೆಣಿಕೆಹಾಳ್, ಕ್ಯಾದಿಗೆಹಾಳ್, ಬಸವಪುರ ಗ್ರಾಮಗಳು. ಎಫ್–1 ಫೀಡರ್‌ನ ಕುರುಗೋಡು ನಗರದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂ ನ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಮೋಹನ್ ಬಾಬು ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಮಕ್ಕಳನ್ನು ಸನ್ನದ್ಧಗೊಳಿಸಿ

## ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ ಹೇಳಿಕೆ | ಸಿದ್ಧತೆಗೆ 3 ಪರೀಕ್ಷೆಗಳು ಮತ್ತು ಪುನಾರಾವರ್ತನೆ

**ಹಂಪಿ ಟೈಮ್ಸ್ ಹೂವಿನ ಹಡಗಲಿ**

ಪ್ರಸಕ್ತ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಿದ್ಧತೆ ಗೊಳಿಸಲು ವಿಷಯ ಶಿಕ್ಷಕರ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ ಹೇಳಿದರು.

ಪಟ್ಟಣದ ಜಿ ಪಿ ಜಿ ಪ್ರೌಢಶಾಲೆ ಯಲ್ಲಿ ಮಂಗಳವಾರ ಶಾಲಾ ಶಿಕ್ಷಣ ಇಲಾಖೆ ಹಾಗೂ ಕನ್ನಡ ಗಣಿತ ವಿಷಯ ಶಿಕ್ಷಕರ ವೇದಿಕೆ ವತಿಯಿಂದ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

2023–24 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಇಲಾಖೆ ವತಿಯಿಂದ 3 ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಹತ್ತನೇ ತರಗತಿ ಪಠ್ಯಕ್ರಮ ಮುಗಿಸಿ ಪುನರಾವರ್ತನೆ ಮಾಡಬೇಕು.

ನಿಧಾನ ಗತಿಯಲ್ಲಿ ಕಲಿಯುವ



ವಿದ್ಯಾರ್ಥಿಗಳು ಪಾಸಾಗಲು ಕನಿಷ್ಠ ಅಂಕ ತೆಗೆಯುವ ಹಾಗೆ ಸೂಕ್ತ ಮಾರ್ಗದರ್ಶನ ನೀಡಿರಿ ಎಂದು ಹೇಳಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ ಮಾತನಾಡಿ, ಎಸ್ಸೆಸ್ಸೆಲ್ಸಿ ಮಕ್ಕಳು ಶಾಲೆಗೆ ಗೈರು ಆಗದಂತೆ ಮುಖ್ಯ ಗುರುಗಳು ತರಗತಿ ಶಿಕ್ಷಕರು ಕ್ರಮ ಕೈಗೊಳ್ಳಬೇಕು ಎಂದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ ಹನುಮಂತಪ್ಪ

ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಪಿ ಪ್ರಕಾಶ್ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಎಚ್ ಮಲ್ಲಿಕಾರ್ಜುನ ಇತರರು ಉಪಸ್ಥಿತರಿದ್ದರು.

ಸಿರುಗುಪ್ಪದ ರವಿ ಆರ್ ಸಂಪನ್ಮೂಲ ವ್ಯಕ್ತಿಯಾಗಿ ಉಪಯುಕ್ತ ಮಾಹಿತಿ ನೀಡಿದರು. ತಾಲೂಕಿನ ಸರ್ಕಾರಿ ಅನುದಾನಿತ ಅನುದಾನರಹಿತ ಮೊರಾರ್ಜಿ ವಸತಿ ಶಾಲೆಗಳ ಕನ್ನಡ ಗಣಿತ ವಿಷಯ ಶಿಕ್ಷಕರು ಕಾರ್ಯಾಗಾರದ ಸದುಪಯೋಗ ಪಡೆದುಕೊಂಡರು.




## ವಚನ ಅರಿವು

# ಅಹಂಕಾರ ಅಳಿಯಬೇಕು

**ಅರ್ಥವುಂಟೆಂದು ಅಹಂಕರಿಸಿ**
**ಮಾಡುವನ ಭಕ್ತಿ ತೊತ್ತಿನ ಕೂಟ,**
**ತೊರೆಯನ ಮೇಳದಂತೆ,**
**ತನು ಮನ ಧನದಲ್ಲಿ ವಂಚನೆಯುಳ್ಳ**
**ಪ್ರಪಂಚಿಯ ಮನೆಯ ಕೂಳು**
**ಶುನಕನ ಬಾಯ ಎಲುವ ಪ್ರತಿ ಶುನಕ ತಿಂದಂತೆ**
**ಕಾಣಾ ರಾಮನಾಥ!**

**– ಜೇಡರ ದಾಸಿಮಯ್ಯ**

ದುಡಿಮೆ ಇಲ್ಲದ ಪೂಜೆ ಶಿವನಿಗೆ ಅರ್ಪಿತವಾಗದು. ಮಾಡುವ ಕಾಯಕದಲ್ಲಿ ನಿಷ್ಠೆ ಇದ್ದರೆ ಅದೇ ಭಕ್ತಿಯಾಗಿರುತ್ತದೆ. ಶ್ರಮದಲ್ಲೇ ದೇವರನ್ನು ಕಾಣಬೇಕು. ಶ್ರೀಮಂತಿಕೆಯ, ಹಣದ ಅಹಂಕಾರದಿಂದ ಮಾಡುವ ಭಕ್ತಿ ನಿಜಭಕ್ತಿಯಾಗಲಾರದು. ಅದರ ಅಪಾಯದ ಬಗ್ಗೆ ಎಚ್ಚರಿಕೆ ಮಾತುಗಳನ್ನಾಡಿದ್ದಾನೆ ವಚನಕಾರ.

ಅಹಂಕಾರದಿಂದ ಮಾಡುವ ಭಕ್ತಿ ದಾಸಿಯೊಡನೆ ಸಂಗ ಮಾಡಿದಂತೆ ಹೀನ. ತೊರೆಗೆ ಕೊಚ್ಚಿ ಹೋದಂತೆ ಭಕ್ತಿ ವ್ಯರ್ಥ. ತನುಮನಧನದಲ್ಲಿ ವಂಚನೆಯುಳ್ಳವನ ಮನೆಯ ಅನ್ನವನ್ನು ಭಕ್ತರೆನಿಸಿಕೊಂಡವರು ಯಾರೂ ತಿನ್ನಬಾರದು, ತಿಂದರೆ ಅದು ನಾಯಿಯ ಬಾಯೊಳಗಿನ ಮೂಳೆಯನ್ನು ಮತ್ತೊಂದು ನಾಯಿ ಕಸಿದು ತಿಂದಂತೆಯಾಗುತ್ತದೆ. ಯಾವ ಯಾವುದೋ ಮಾರ್ಗದಿಂದ ಗಳಿಸಿದ ಹಣದ ಅಹಂಕಾರದಿಂದ ಮಾಡುವ ಭಕ್ತಿ ಶಿವನಿಗೂ ಪ್ರಿಯವಾಗುವುದಿಲ್ಲ, ಅರ್ಪಣೆ ಯಾಗುವುದಿಲ್ಲ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಆಯುಷ್ಮಾನ್ ಭವಃ ಆರೋಗ್ಯ ಮೇಳ; ಪರೀಕ್ಷಿಸಿಕೊಳ್ಳಿ

ಮೊದಲ ಪುಟದಿಂದ

ಒಂದು ವೇಳೆ ಕುಷ್ಠರೋಗವೆಂದು ಖಚಿತ ಪಟ್ಟಲ್ಲಿ ಉಚಿತ ಚಿಕಿತ್ಸೆ ಲಭ್ಯ ಪಡೆಯಬಹುದು ಎಂದು ತಿಳಿಸಿದ್ದಾರೆ.

ಆಯುಷ್ಮಾನ್ ಭವಃ ಮೇಳ ಮುಂದುವರಿಕೆ ಹಿನ್ನಲೆಯಲ್ಲಿ, ಶಿಬಿರದಲ್ಲಿ ಜೀವನ ಶೈಲಿಯ ರೋಗಗಳಾದ ರಕ್ತದೊತ್ತಡ, ಸಕ್ಕರೆ ಕಾಯಿಲೆಯನ್ನು ಪರೀಕ್ಷೆ, ಎರಡು ವಾರಕ್ಕಿಂತ ಹೆಚ್ಚು ದಿನಗಳ ಕೆಮ್ಮು ಇದ್ದಲ್ಲಿ ಕ್ಷಯರೋಗ ಪರೀಕ್ಷೆ ಹಾಗೂ ರೋಗ ಲಕ್ಷಣಗಳು ಉಳ್ಳುವರ ಕಫ ಪರೀಕ್ಷೆಯನ್ನು ಕೈಗೊಳ್ಳಲಾಗುವುದು ಮತ್ತು ಇತರ ಸಾಮಾನ್ಯ ಆರೋಗ್ಯ ಸೇವೆಗಳನ್ನು ಸಹ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವಂತಹ ರೋಗಿಗಳಿಗೆ ಜಿಲ್ಲಾ ಆಸ್ಪತ್ರೆ ಮತ್ತು ವಿಮ್ಸ್‌ಗೆ, ಕಳಿಸಿಕೊಡಲಾಗುವುದು. ಶಿಬಿರದಲ್ಲಿ ಆಯುಷ್ಮಾನ್ ಭವ– ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ– ಮುಖ್ಯಮಂತ್ರಿಯ ಆರೋಗ್ಯ ಕರ್ನಾಟಕ ಯೋಜನೆ ಕಾರ್ಡ್, ಡಿಜಿಟಲ್ ಹೆಲ್ತ್‌ಕಾರ್ಡ್‌ಗಳನ್ನು ಸೃಜಿಸಲಾಗುವುದು. ಜಿಲ್ಲೆಯಲ್ಲಿ ಈಗಾಗಲೇ 3000 ಜನರ ಅಂಗಾಂಗ ದಾನ ನೋಂದಣಿಯನ್ನು ಮಾಡಿ ರಾಜ್ಯ ಮಟ್ಟದಲ್ಲಿ ಮುಂಚುಣಿಯಲ್ಲಿದ್ದು, ಅಂಗಾಂಗ ನೋಂದಣಿ ಸಹ ಮಾಡಲಾಗುವುದು ಎಂದಿದ್ದಾರೆ.

ಶಿಬಿರದಲ್ಲಿ ಡೆಂಗ್ಯು ಮತ್ತು ಚಿಕುನ್‌ಗುನ್ಯ, ಕುಟುಂಬ ಕಲ್ಯಾಣ ವಿಧಾನಗಳು, ತಾಯಿ ಮಗುವಿನ ಆರೈಕೆ, ಟೆಲಿ ಮನಸ್ ಮಾನಸಿಕ ಆರೋಗ್ಯ ಸಹಾಯವಾಣಿ 14416 ಕುರಿತು ಮಾಹಿತಿ ನೀಡಲಾಗುವುದು. ಸಾರ್ವಜನಿಕರು ತಮ್ಮ ಆಧಾರ್‌ಕಾರ್ಡ್, ಮೊಬೈಲ್ ಸಂಖ್ಯೆ ಹಾಗೂ ಈ ಹಿಂದೆ ಅಸ್ಪತ್ರೆಗೆ ತೋರಿಸಿದ ಚೀಟಿಗಳನ್ನು ತಂದು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

**ಕೋವಿಡ್ ನಿರ್ವಹಣೆಗೆ ಸಿದ್ದತೆ:** ಕೋವಿಡ್ ಮುಂಜಾಗ್ರತೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಎಲ್ಲಾ ಆಸ್ಪತ್ರೆಗಳಲ್ಲಿ ಬೆಡ್‌ಗಳ ಸಿದ್ದತೆ, ಆಕ್ಸಿಜನ್ ಸಂಪರ್ಕ ಸಮರ್ಪಕವಾಗಿದ್ದು, ಪ್ರತಿ ದಿನ ಕೆಮ್ಮು ನೆಗಡಿ ಉಸಿರಾಟದ ತೊಂದರೆ ಇರುವವರನ್ನು ಗುರುತಿಸಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಮನೆಯಿಂದ ಹೊರಗಡೆ ಬರುವಂತ ಸಂದರ್ಭದಲ್ಲಿ ಮಾಸ್ಕ್ ಧರಿಸಲು ಜಾಗೃತಿ ನೀಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 9448633038

### ಮೂರ್ತ ಹಾಗೂ ಅಮೂರ್ತಗಳ ಸಂಗಮ

# ನುಡಿದಂತೆ ನಡೆದ ಹಾಲೇಶಪ್ಪ ಮೇಷ್ಟ್ರ

**ಕುರ್ಚಿಯ ಮೇಲೆ ಕುಳಿತು ಪಾಠ ಮಾಡಿದವರಲ್ಲ । ವಿದ್ಯಾರ್ಥಿಗಳಿಗೆ ಬೈಗುಳವನ್ನಾಗಲಿ, ಬೆತ್ತ ಹಿಡಿದು ಬೆದರಿಸಿದ್ದು ಇಲ್ಲವೇ ಇಲ್ಲ**

ಶಿಕ್ಷಕ ಹುದ್ದೆಯ ಕಾಯಕದಲ್ಲಿ ಅಧ್ಯಯನ, ಬೋಧನೆ, ಶಾಲೆಯಲ್ಲಿ ಶೈಕ್ಷಣಿಕ–ಸಾಂಸ್ಕೃತಿಕ ವಾತಾವರಣದ ನಿರ್ಮಾಣ, ಕರ್ತವ್ಯ ಪ್ರಜ್ಞೆ, ಶಿಸ್ತು, ಶ್ರದ್ಧೆ, ಆಸಕ್ತಿಗಳಿಂದ ಶಿಕ್ಷಕ ಹುದ್ದೆಯ ನಿರ್ವಹಣೆ, ಪಠ್ಯಗಳಿಗೆ ಸೀಮಿತಗೊಂಡು ತರಗತಿಗಳಲ್ಲಿ ಪಾಠಗಳ ಬೋಧನೆಗೆ ಸೀಮಿತರಾಗದೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನ, ಸಾಹಿತ್ಯ, ಚರಿತ್ರೆ, ರಂಗಭೂಮಿ, ವೈಜ್ಞಾನಿಕ ಚಿಂತನೆ ಹೀಗೆ ಹಲವು ವಿಷಯಗಳು, ವಿಜ್ಞಾನ, ನಾಟಕಗಳ ಪ್ರಯೋಗಗಳ ಮೂಲಕ ಬೋಧನೆ ಮಾಡುತ್ತ, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಬೌದ್ಧಿಕ ಜ್ಞಾನವನ್ನು ಹೆಚ್ಚಿಸಿ, ಆ ಮೂಲಕ ಅವರ ಉಜ್ವಲ ಭವಿಷ್ಯವನ್ನು ರೂಪಿಸಿದ ಅಪರೂಪದಲ್ಲಿ ಅಪರೂಪದ ಮೇಷ್ಟ್ರು ಹಿರೇಹಡಗಲಿಯ ಕೆ. ಹಾಲೇಶಪ್ಪ.

ತಮ್ಮ ಆಸಕ್ತಿದಾಯಕವಾದ ಬೋಧನೆಯ ನಿರೂಪಣಾ ಶೈಲಿಯಿಂದ ವಿದ್ಯಾರ್ಥಿಗಳ ಮನಸ್ಸನ್ನು ಸೆರೆ ಹಿಡಿದಿದ್ದವರು. ಇತ್ತ ತಮ್ಮ ಸಹಜ ಇರುವಿಕೆಯಿಂದಲೇ ಸಹದ್ಯೋಗಿಗಳಲ್ಲಿ ಕರ್ತವ್ಯದ ಬಗ್ಗೆ ಕಾಳಜಿ ಹಾಗೂ ಕರ್ತವ್ಯ ಪ್ರಜ್ಞೆಯನ್ನು ಬೆಳೆಸಿದ್ದವರು. ತಮ್ಮ ಶಿಕ್ಷಕ ಹುದ್ದೆಯ ಕರ್ತವ್ಯದಲ್ಲಿ ಕಠಿಣ ಶ್ರಮ, ನಿರಂತರವಾದ ಅಧ್ಯಯನ, ಕ್ರಿಯಾಶೀಲತೆ, ಗಾಢವಾದ ಶೈಕ್ಷಣಿಕ–ಸಾಂಸ್ಕೃತಿಕ ಪ್ರೀತಿಯಿಂದ ತಮ್ಮ 33 ವರ್ಷಗಳ ಸುದೀರ್ಘವಾದ ವೃತ್ತಿ ಬದುಕನ್ನು ಹಾಗೂ ವೈಯಕ್ತಿಕ ಬದುಕನ್ನು ಶಿಕ್ಷಕ ಹುದ್ದೆಗೆ ಧಾರೆ ಎರೆದು, ಸರ್ಕಾರಿ ಶಾಲೆಗಳನ್ನು ಬೆಳೆಸಿದ ಶ್ರಮ ಸಂಸ್ಕೃತಿಯ ಮೇಷ್ಟ್ರು ಕೆ. ಹಾಲೇಶಪ್ಪನವರು. ಇವರ ಶೈಕ್ಷಣಿಕ ಸಾಂಸ್ಕೃತಿಕ ಸಾಧನೆ–ವ್ಯಕ್ತಿತ್ವ ಕುರಿತ ಒಂದು ಪಕ್ಷಿ ನೋಟ.

'ಹಾಲೇಶಪ್ಪ ಮೇಷ್ಟ್ರು' ಎಂದೇ ಪ್ರಸಿದ್ಧಿ ಪಡೆದಿರುವವರು. ಇವರು ಶಾಲೆಯ ತರಗತಿಗಳಲ್ಲಿ ಯಾವುದೇ ಸಂದರ್ಭದಲ್ಲಿಯು ಕುರ್ಚಿಯ ಮೇಲೆ ಕುಳಿತು ಪಾಠ ಮಾಡಿದವರಲ್ಲ. ಹಾಗೇನೆ ಯಾವೊಬ್ಬ ವಿದ್ಯಾರ್ಥಿಗೂ ಬೈಗುಳವನ್ನಾಗಲಿ, ಬೆತ್ತವನ್ನು ಹಿಡಿದು ಬೆದರಿಸಿದ್ದು ಇಲ್ಲವೇ ಇಲ್ಲ. ಹೀಗಿದ್ದಾಗಲೂ ವಿದ್ಯಾರ್ಥಿಗಳು ಇವರ ಕಂಡರೆ ಅಂಜಿ ನಡೆಯುತ್ತಿದ್ದರು. ಕಾರಣ ಹಾಲೇಶಪ್ಪ ಮೇಷ್ಟ್ರು ವ್ಯಕ್ತಿತ್ವಕ್ಕೆ, ಬಿ.ಎ. ಮಹಾಲಿಂಗಯ್ಯ, ಕೆ.ಎಂ. ಶಂಭುಲಿಂಗಯ್ಯ ಮೊದಲಾದವರ ಪಂಡಿತ ಗುರು ಪರಂಪರೆಯಲ್ಲಿ ಬೆಳೆದು ಬಂದ ಇವರು, ಮುಂದೆ ಅವರೊಂದಿಗೆ ಕಾರ್ಯನಿರ್ವಹಿಸುವ ಸೌಭಾಗ್ಯ ಸಹ ದೊರೆತ್ತಿದ್ದು ಇವರ ಭಾಗ್ಯ.

ಕ್ಲಾಸಿನಲ್ಲಿ ಬೋಧಿಸಬೇಕಾದ ವಿಷಯವನ್ನು ರಾತ್ರಿಯ ಸಮಯದಲ್ಲಿ ಕುಳಿತು ಟಿಪ್ಪಣಿ ಮಾಡಿಟ್ಟುಕೊಂಡು ಬಂದು, ಸಮಯಕ್ಕೆ ಸರಿಯಾಗಿ ಕ್ಲಾಸಿಗೆ ಹೋಗಿ, ಶಿಸ್ತುಬದ್ಧವಾಗಿ ಪಾಠ ಮಾಡುವುದರ ಜೊತೆಗೆ ಅವರ ಆತ್ಮಸ್ಥೈರ್ಯವನ್ನು ಅವರ ಉತ್ಸಾಹವನ್ನು ಹೆಚ್ಚುವಂತೆ ಮಾಡಿದ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಮೇಷ್ಟ್ರು. 1965 ರಿಂದ ಹೈಸ್ಕೂಲ್ ಶಿಕ್ಷಕರಾಗಿ, ಹಿರೇಹಡಗಲಿ, ಮಾಗಳ, ಮಾನ್ಯರ ಮಸಲವಾಡ ಹೈಸ್ಕೂಲ್‌ಗಳಲ್ಲಿ, ಹಿರೇಹಡಗಲಿಯ ಹಿರಿಯ ಪ್ರಾಥಮಿಕ ಶಾಲೆಯ ಗ್ರಾಜ್ಯುಯೇಟ್ ಹೆಡ್‌ಮಾಸ್ಟರ್ ಆಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುವವರು.

ಇಷ್ಟು ಹೇಳಿದರೆ ಇವರ ಶಿಕ್ಷಕ ವೃತ್ತಿ ಬದುಕು ಪೂರ್ಣಗೊಳ್ಳುವುದಿಲ್ಲ. ಏಕೆಂದರೆ ಇವರು ನೇರವಾಗಿ ಶಿಕ್ಷಕರಾಗಿ ನೇಮಕಗೊಂಡು, ಕೈ ತುಂಬಾ ಸಂಬಳ ಪಡೆದ ಶಿಕ್ಷಕ ವರ್ಗಕ್ಕೆ ಸೇರಿದವರಲ್ಲ. 1960 ರ ಕಾಲಘಟ್ಟದಲ್ಲಿ ಹಿರೇಹಡಗಲಿಯಲ್ಲಿ ಹೈಸ್ಕೂಲ್ ಶಿಕ್ಷಣ ಪಡೆಯಲು ಅವಕಾಶಗಳಿರಲಿಲ್ಲ. ಇದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿರುವುದನ್ನು ಮನಗಂಡ ಊರಿನ ಹಿರಿಯರಾದ ವೀರಪ್ಪ ಕೊಂಪಿ, ಹೆಚ್.ಎಂ. ಪಂಚಾಕ್ಷರಯ್ಯ, ಪಟ್ಟೇದ ಶಿವಪ್ಪ, ಡಾ. ನಾಗಜ್ಜ, ಜವಳಿ ರುದ್ರಪ್ಪ, ಡಂಬಳ ಚೆನ್ನಪ್ಪ ಮೊದಲಾದವರು ಸೇರಿ 'ವಿದ್ಯಾವರ್ಧಕ ಸಂಘ'ದ ಮೂಲಕ ಹೈಸ್ಕೂಲ್ ಹಾಗೂ ಹಾಸ್ಟಲ್‌ನ್ನು ಪ್ರಾರಂಭಿಸಿದ್ದರು. ಈ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಹಾಗೂ ಹಾಸ್ಟಲ್ ನಿರ್ವಹಿಸುವ ಜವಾಬ್ದಾರಿಯನ್ನು ಆಗತಾನೆ ವಿದ್ಯಾಭ್ಯಾಸ ಮುಗಿಸಿಕೊಂಡು ಬಂದಿದ್ದ ಕೆ. ಹಾಲೇಶಪ್ಪ ಇವರಿಗೆ ವಹಿಸಲಾಯಿತು. ಗ್ರಾಮ ಪಂಚಾಯ್ತಿ ಕಟ್ಟಡವೊಂದರಲ್ಲಿ ಹೈಸ್ಕೂಲ್, ಪ್ರಭುಸ್ವಾಮಿ ಮಠದಲ್ಲಿ ಹಾಸ್ಟಲ್‌ನ್ನು ಪ್ರಾರಂಭಿಸಲಾಯಿತು. ಇವರು ಬಿ.ಎ. ಈರಣ್ಣ ಹಾಗೂ ಹಲಗೇರಿ ಕೊಟ್ರೇಶಪ್ಪ ಇವರು ಶಿಕ್ಷಕರಾಗಿ ಪಾಠ ಮಾಡುತ್ತಿದ್ದರು. ಊರಿನಲ್ಲಿ ಎರಡು ಹೊತ್ತು ಬಸಯ್ಯ ಎಂಬ ವ್ಯಕ್ತಿ ಕಂತೆ ಭಿಕ್ಷೆ ಮಾಡಿಕೊಂಡು ಬಂದು ಹಾಸ್ಟಲ್ ವಿದ್ಯಾರ್ಥಿಗಳಿಗೆ ಊಟ ಬಡಿಸುತ್ತಿದ್ದರು. ಹೈಸ್ಕೂಲ್ ಮತ್ತು ಹಾಸ್ಟಲ್ ನಿರ್ವಹಣೆಯನ್ನು ಯಾವುದೇ ಸಂಬಳ, ಸಂಭಾವನೆ ಇಲ್ಲದೆ ಕೆ. ಹಾಲೇಶಪ್ಪ ಮೊದಲಾದವರು ನಿರ್ವಹಿಸುತ್ತಿದ್ದರು.

ಈ ಹೈಸ್ಕೂಲ್‌ನ್ನು ತಾಲೂಕು ಬೋರ್ಡ್‌ಗೆ ಸೇರಿಸಿ, ನಂತರ ಎನ್. ಎಂ.ಕೆ. ಸೋಗಿಯವರು ಉಪಶಿಕ್ಷಣ ಮಂತ್ರಿಗಳಾದಾಗ ಜಿಲ್ಲಾ ಬೋರ್ಡಿಗೆ ಸೇರಿಸಿ ಸರ್ಕಾರಿ ಶಾಲೆಯನ್ನಾಗಿ ಪರಿವರ್ತಿಸುವಲ್ಲಿ ಕೆ. ಹಾಲೇಶಪ್ಪ ಶಿಕ್ಷಕರ ಪಾತ್ರ ಅತ್ಯಂತ ಹಿರಿದಾದದ್ದು. ಈ ಸರ್ಕಾರಿ ಹೈಸ್ಕೂಲಿಗೆ ಮುಂದೆ ಇವರೆ ನೇಮಕಗೊಂಡರು. 1965ರಲ್ಲಿ ಕೆ.ಎಂ. ಶಂಭುಲಿಂಗಯ್ಯನವರು ಮುಖ್ಯ ಗುರುಗಳಾಗಿ ಬಂದಾಗ, ಅವರ ನೇತೃತ್ವದಲ್ಲಿ ಇವರ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಾ ಶಾಲೆಯನ್ನು ಇಡೀ ಜಿಲ್ಲೆಗೆ ಮಾದರಿ ಶಾಲೆಯನ್ನಾಗಿ ಮಾಡಿದ್ದವರು.



**ಬಹುಮುಖ ಪ್ರತಿಭೆ :**

ಕಾಣುವ ಮೂರ್ತ ಹಾಗೂ ಕಾಣದಿರುವ ಅಮೂರ್ತಗಳ ವಿಶಿಷ್ಟ ಸಂಗಮ 'ಮೇಷ್ಟ್ರು'. ಇಂತಹ ಪದಕ್ಕೆ ಪರಿಪೂರ್ಣವಾದ ಅರ್ಥ ಹಾಗೂ ಸಮರ್ಥ ವ್ಯಕ್ತಿತ್ವ ಹಾಲೇಶಪ್ಪ ಮೇಷ್ಟ್ರದ್ದು. ಇವರು ಶಿಕ್ಷಕರಷ್ಟೇ ಅಲ್ಲ, ಶಿಕ್ಷಣದ ಚಿಂತಕ, ಕಾಯಕ ನಿಷ್ಠೆಯುಳ್ಳವರೂ, ಸತ್ಯ, ಶಾಂತಿ, ಸಹನಾಮೂರ್ತಿಗಳು, ಅಧ್ಯಯನಶೀಲರು, ಕಲೆ, ವಿಜ್ಞಾನದಲ್ಲಿ



**ಎಂ.ಎಂ.ಶಿವಪ್ರಕಾಶ**
**ಹೊಸಪೇಟೆ**

ಆಸಕ್ತಿಯುಳ್ಳವರು, ನಟ, ನಾಟಕಕಾರ, ನಿರ್ದೇಶಕ–ಸಂಘಟಕರು. ಸಮಾಜಜೀವಿಗಳು, ಅಹಿಂಸಾವಾದಿಗಳಾಗಿರುವ ಇವರದ್ದು ಹಲವು ಅಮೂರ್ತಗಳ ಸಂಗಮದ ವ್ಯಕ್ತಿತ್ವ. ಇಷ್ಟೆಲ್ಲಾ ಮೌಲ್ಯಗಳನ್ನು ಒಳಗೊಳ್ಳುವುದು ಹಾಲೇಶಪ್ಪನವರಿಗೆ ಮಾತ್ರ ಸಾಧ್ಯ. ನಡೆ–ನುಡಿ ಒಂದಾಗಬೇಕು, ನುಡಿದಂತೆ ನಡೆಯಬೇಕು. ಹಾಗೇ ನಡೆದಂತೆ ನುಡಿಯಬೇಕು. ಈ ನಡೆ–ನುಡಿ ಒಂದಾದ ವ್ಯಕ್ತಿತ್ವವನ್ನು ಇವರಲ್ಲಿ ಕಾಣಬಹುದು.

ತಮ್ಮ ವಿಷಯದ ಪಾಠಗಳ ಜೊತೆಗೆ ವಿಜ್ಞಾನಗಳ ಪ್ರಯೋಗಗಳನ್ನು ವಿದ್ಯಾರ್ಥಿಗಳಿಗೆ ಮಾಡಿ ತೋರಿಸುತ್ತಿದ್ದರು. ವಿಜ್ಞಾನದ ಶಿಕ್ಷಕರಿಗೆ ಆಗದ್ದನ್ನು ಇವರು ಮಾಡಿ, ರಾಜ್ಯಮಟ್ಟದ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಪ್ರಶಸ್ತಿಗಳನ್ನು ತಂದು ಕೊಟ್ಟಿವೆ ಇವರ ಪ್ರಯೋಗಗಳು. ಹಲವಾರು ಕವಿತೆ, ಲೇಖನ, ನಾಟಕಗಳನ್ನು ರಚಿಸಿದ್ದಾರೆ. ಇವರ ಪ್ರಸಿದ್ಧ ನಾಟಕಿಲ್ಲಿ ಸಲ್ಲುವರು ಅಲ್ಲಿ ಸಲ್ಲುವರೆ?

ಸಮರ್ಥ ನಟ–ನಿರ್ದೇಶಕರು

ಕೆ. ಹಾಲೇಶಪ್ಪ ಕೇವಲ ತರಗತಿಗಳ ಪಾಠ–ಪಠ್ಯಗಳಿಗೆ ಸೀಮಿತವಾದವರಲ್ಲ. ಅವರಲ್ಲಿ ಕಲೆ, ಸಾಹಿತ್ಯ, ಸಂಗೀತ, ಚಿತ್ರಕಲೆ, ವಿಜ್ಞಾನ, ನಾಟಕ ಹೀಗೆ ಎಲ್ಲ ರಂಗಗಳ ಅಮೂರ್ತ ವ್ಯಕ್ತಿತ್ವ ಇವರದ್ದು. ಶಾಲೆಯಲ್ಲಿ ಮಕ್ಕಳಿಗಾಗಿ ಇವರು ನಾಟಕಗಳನ್ನು ಮಾಡಿಸಿ ಸೈ ಎನಿಸಿಕೊಂಡಿದ್ದಾರೆ. 70–80ರ ದಶಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮನರಂಜನೆಯೆಂದರೆ ಸಿನಿಮಾ ಇಲ್ಲವೇ ನಾಟಕಗಳು. ಹೀಗಾಗಿ ನಾಟಕಗಳೆಂದರೆ ಗ್ರಾಮೀಣರಿಗೆ ಎಲ್ಲಿಲ್ಲದೆ ಆಸಕ್ತಿ. ಹೀಗಾಗಿಯೇ ಜನವರಿ 26, ಆಗಸ್ಟ್ 15 ರಂದು ರಾಷ್ಟ್ರೀಯ ಹಬ್ಬಗಳನ್ನು ಬೆಳಿಗ್ಗೆ ಶಾಲೆಗಳಲ್ಲಿ ಆಚರಿಸಿ, ಅದೇ ಮಕ್ಕಳಿಂದ ರಾತ್ರಿ ಮನರಂಜನೆಯ ಕಾರ್ಯಕ್ರಮಗಳನ್ನು ಶಾಲೆಯ ಆವರಣದಲ್ಲಿ ಏರ್ಪಡಿಸುತ್ತಿದ್ದರು. ಈ ಮಕ್ಕಳ ಹಾಡು, ಹಾಸ್ಯ, ನಾಟಕಗಳನ್ನು ನೋಡಲು ಇಡೀ ಊರಿಗೆ ಊರೇ ಸೇರುತ್ತಿತ್ತು. ಇವೆಲ್ಲವುಗಳ ಆಯ್ಕೆ, ನಿರ್ದೇಶನ ಎಲ್ಲವೂ ಕೆ. ಹಾಲೇಶಪ್ಪ ಮೇಷ್ಟ್ರದ್ದೇ ಆಗಿರುತ್ತಿತ್ತು. ಇವರೊಂದಿಗೆ ತಮ್ಮ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದ ಕೆ.ಎಂ. ಚನ್ನವೀರಯ್ಯ ಮೇಷ್ಟ್ರು ಸಹ ಇವರೊಟ್ಟಿಗೆ ಇರುತ್ತಿದ್ದರು.

1970–80ರ ಕಾಲಘಟ್ಟದಲ್ಲಿ ಚಂದ್ರಶೇಖರ ಪಾಟೀಲರ ನಾಟಕಗಳು ಅತ್ಯಂತ ಜನಪ್ರಿಯವಾಗಿದ್ದವು. ಅಂತಹ ನಾಟಕಗಳನ್ನು ಆಯ್ದುಕೊಂಡು ಪ್ರತಿ ವರ್ಷ ಒಂದೆರೆಡು ನಾಟಕಗಳನ್ನು ವಿದ್ಯಾರ್ಥಿಗಳಿಂದ ಮಾಡಿಸುತ್ತಿದ್ದರು. ಅವುಗಳಲ್ಲಿ ಕೊಡೆಗಳು, ಕುಂಟಾ ಕುಂಟಾ ಕುರವತ್ತಿ, ಟಿಂಗರ ಬುಡ್ಡಣ್ಣ, ಗೋಕರ್ಣದ ಗೌಡಶಾನಿ ಮೊದಲಾದವುಗಳು. ಇವುಗಳಿಗೆ ಸಮರ್ಥವಾದ ನಿರ್ದೇಶನ ಮಾಡಿ, ವಿದ್ಯಾರ್ಥಿಗಳಿಂದ ನಟನೆ ಮಾಡಿಸಿ, ಇಡೀ ಊರಿನ ಜನರಿಂದ ಹೊಗಳಿಸಿಕೊಂಡ ನಿರ್ದೇಶಕರು ಕೆ. ಹಾಲೇಶಪ್ಪ ಇಷ್ಟೇ ಅಲ್ಲ ಮಕ್ಕಳಿಗಾಗಿಯೇ ಬರೆದು ನಿರ್ದೇಶಿಸಿದ್ದು ಇವೆ.

ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಶಿಕ್ಷಕರು, ಆಸಕ್ತ ಜನರನ್ನು ಸೇರಿಸಿಕೊಂಡು 'ಸೂರ್ಯ ಕಲಾ ನಾಟ್ಯ ಸಂಘ'ವನ್ನು ಕಟ್ಟಿ, ಅದರ ಮೂಲಕ ಸಾಮಾಜಿಕ ನಾಟಕಗಳನ್ನು ನಿರ್ದೇಶನ ಮಾಡುತ್ತಿದ್ದರು. ನಮ್ಮೂರಿನ ಹಾಲಸ್ವಾಮಿಗಳ ಜಾತ್ರೆಯಲ್ಲಿ ವಾರಗಟ್ಟಲೆ ಇವರ ನಿರ್ದೇಶನದ ನಾಟಕಗಳು ಹೌಸ್‌ಫುಲ್ ಆಗಿ ನಡೆದಿದ್ದು ಇವೆ. ಇವರ ಈ ಸಾಮಾಜಿಕ ನಾಟಕಗಳಲ್ಲಿ ಅರಿಶಿಣಗೋಡಿ ಅವರ 'ಕಣ್ಣಿದ್ದು ಕುರುಡ' ನಾಟಕದ ನಿರ್ದೇಶನ ಅತ್ಯಂತ ಜನಪ್ರಿಯತೆಯನ್ನು ಕಂಡು ಹಲವಾರು ಪ್ರದರ್ಶನಗಳನ್ನು ಕಂಡಿತ್ತು. ಈ ನಾಟಕದಲ್ಲಿ ನಟನೆ ಮಾಡಲು ಬೆಂಗಳೂರಿನಿಂದ ರಂಗಭೂಮಿಯ ಖ್ಯಾತ ನಟರಾದ ಸುದರ್ಶನ ಶೈಲ್ ಶ್ರೀ, ಸುಂದರ ರಾಜ್, ಪ್ರೇಮಿಳ ಜೋಷಸ್, ವಿಜಯಕಲಾ ಮೊದಲಾದವರನ್ನು ಕರೆಯಿಸಿ ಪ್ರದರ್ಶನಗಳನ್ನು ನೀಡಿದ್ದು ಈಗ ಚರಿತ್ರೆಯೇ ಆಗಿದೆ. ಹೀಗೆ ಹಿರೇಹಡಗಲಿಯಲ್ಲಿ ಹವ್ಯಾಸಿ ಮತ್ತು ವೃತ್ತಿರಂಗಭೂಮಿಗೆ ಇವರ ಕೊಡುಗೆ ಅನನ್ಯವಾದದ್ದು. ಇವರ ನಿರ್ದೇಶನದ... ಕಣ್ಣಿದ್ದು ಕುರುಡ ನಾಟಕ ನೋಡಲು ನಾಟಕಾರ ಅರಿಶಿಣಗೋಡೆಯವರು ಯಾರಿಗೂ ಗೊತ್ತಾಗದ ಹಾಗೆ ಬಂದು ಕುಳಿತು ನಾಟಕ ನೋಡಿದ ಮೇಲೆ ನನ್ನಗಿಂತ ಚೆನ್ನಾಗಿ ನಿರ್ದೇಶನ ಮಾಡಿರುವಿರಿ ಎಂದು ಬೆನ್ನುತಟ್ಟಿದ್ದರು.

ರಾಜ್ಯ ಮಟ್ಟದ ನಾಟಕಗಳ ಸ್ಪರ್ಧೆಯಲ್ಲಿ ಹಾಲೇಶಪ್ಪ ಮೇಷ್ಟ್ರು ನಿರ್ದೇಶಿಸಿದ 'ಟಿಂಗರ ಬುಡ್ಡಣ್ಣ' ನಾಟಕ ಪ್ರಥಮ ಸ್ಥಾನವನ್ನು ಪಡೆದು ಅವರ ಪ್ರತಿಭೆಯು ರಾಜ್ಯ ಮಟ್ಟದಲ್ಲಿ ಪ್ರದರ್ಶಿಸಲ್ಪಟ್ಟಿತ್ತು. ಚಂಪಾ ಅವರ ಬಹುತೇಕ ನಾಟಕಗಳನ್ನು ಇವರು ನಿರ್ದೇಶಿಸಿ ಅವುಗಳನ್ನು ಜನಪ್ರಿಯಗೊಳಿಸಿದ್ದರು. 84ರ ವಯಸ್ಸಿನ ಹಾಲೇಶಪ್ಪ ಮೇಷ್ಟ್ರು, ನಾಟಕದ ವಿಷಯ ಬಂದಾಗ ಯುವಕನಂತೆ ಉತ್ಸಾಹ, ಮೊನ್ನೆ ಅವರನ್ನು ಭೇಟಿಯಾಗಲು ಹೋಗಿ, ಕುಳಿತಾಗ ಅವರು ಚಂಪಾ ಅವರ ನಾಟಕಗಳನ್ನು ಮೆಲುಕು ಹಾಕಿ, ಚಂಪಾ ಅವರ ಸಮಗ್ರ ನಾಟಕಗಳ ಪುಸ್ತಕವನ್ನು ಕೈಗೆತ್ತಿಕೊಂಡು ಕುಂಟ ಕುಂಟ ಕುರವತ್ತಿಯ ನಾಟಕದ ಜನಪ್ರಿಯ ಡೈಲಾಗ್ ಆದ –

ಬೂಟು ಅನಬೇಕು ಬಾಟಾ ಅವನೌನ
ಗಸಗಸ ತಿಕ್ಕಿ ಮಾರೀ ನೋಡಿಕೆಂಡರೆ
ಅಮಾಸ ಕಾವಳದಾಗ ಚಿಕ್ಕಿ ಥಕ್ ಅಂದಂಗ ಅನಬೇಕು
ಬೂಟು ಏರಿಸಿಕೊಂಡು ಕುದುರೀಹಂಗ
ಟಿಕ್ ಟಿಕ್ ಅಂತ ಹೊರಟರ
ಮಾರಿ ನೋಡದ ಬಿಟ್ಟು ಅವನೌನ ಮಂದಿ
ಬೂಟ ನೋಡಿರಬೇಕು
ಹೀಗೆ ಡೈಲಾಗ್ ಹೇಳಿಯೇ ಬಿಟ್ಟರು.

ನಾಟಕ ಅಂದರೆ 84ರಲ್ಲಿಯು ಅವರದ್ದು 24 ರ ಉತ್ಸಾಹ, ಹೀಗೆ ಬಹುಮುಖ ವ್ಯಕ್ತಿತ್ವದ ಹಾಲೇಶಪ್ಪ ಮೇಷ್ಟ್ರು. ಅಂದರೆ ನಡೆದಾಡುವ ವಿಶ್ವಕೋಶ ಅಂತಲೇ ಕರೆಯುತ್ತಾರೆ. ಪುಟಗಳ ಮಿತಿಯಲ್ಲಿ ಇವರ ಬಗ್ಗೆ ಬರೆಯುವುದು ಕಷ್ಟ. ಹೈಸ್ಕೂಲ್ ಶಿಕ್ಷಕರಾಗಿ ನಿವೃತ್ತಿ ಹೊಂದಿರುವ ಇವರು, ತಮ್ಮ ವೃತ್ತಿಗಾಗಿ ಕಾರ್ಯನಿರ್ವಹಿಸದೆ, ಆಸಕ್ತಿಗಾಗಿ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ, ಸರ್ಕಾರಿ ಶಾಲೆಗಳ ಬೆಳವಣಿಗಾಗಿ ಕಾರ್ಯ ಮಾಡಿದವರು. ಇವರು ಹಿರೇಹಡಗಲಿಯ ಹೈಸ್ಕೂಲ್‌ನ್ನು ಪಬ್ಲಿಕ್ ಸ್ಕೂಲ್ ಎಂದು ಮೇಲ್ದರ್ಜೆಗೇರಿಸುವಾಗ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಎಂದಾಗ, ಮತ್ತಷ್ಟು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅವರ ಶುಲ್ಕ ಇತ್ಯಾದಿಗಳನ್ನು ತಾವೇ ಭರಿಸಿ 'ಪಬ್ಲಿಕ್ ಸ್ಕೂಲ್' ಆಗಿ ಪರಿವರ್ತಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.

ಇವರು ತಮ 33 ವರ್ಷಗಳ ಶಿಕ್ಷಕ ವೃತ್ತಿಯನ್ನು, ಉದ್ಯೋಗದ ಸಲುವಾಗಿ ನಿರ್ವಹಿಸದೆ, ಶಿಕ್ಷಣ–ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಶ್ರಮಿಸಿದವರು. ಇವರು ಹುಟ್ಟಿದ್ದು ಹರಪನಹಳ್ಳಿಯಲ್ಲಿ. 1939ರಲ್ಲಿ ತಂದೆ ಕೌಟ ಚನ್ನವೀರಪ್ಪ, ತಾಯಿ ಹಾಲಮ್ಮ. ಇವರು 3 ವರ್ಷದವರಾಗಿರುವಾಗಲೇ ತಂದೆಯನ್ನು ಕಳೆದುಕೊಂಡು ಬೆಳೆದವರು. ಹರನಪಹಳ್ಳಿ ದಾವಣಗೇರಿಯಲ್ಲಿ ವಿದ್ಯಾಭ್ಯಾಸ ಮಾಡಿ, ಹಡಗಲಿಯಲ್ಲಿ ಬದುಕನ್ನು ಪ್ರಾರಂಭಿಸಿದ್ದವರು. ಇವರಿಗೆ ನೀಲಮ್ಮ ಪತ್ನಿ, ಚಂದ್ರಶೇಖರ, ನಟರಾಜ ಹಾಗೂ ಗೌರಮ್ಮ ಮಕ್ಕಳು. ಇವರು ಮನೆ ಬಿಟ್ಟು ಶಾಲೆಯ ಕೆಲಸ ಕಾರ್ಯಗಳು, ನಾಟಕ, ಸಮಾಜ ಸೇವೆ ಎಂದು ಮನೆ ಸೇರದ ಓಡಾಡುತ್ತಿರುವಾಗ ಇವರ ಪತ್ನಿ ಇವರ ಬೆಂಬಲಕ್ಕೆ ನಿಂತು ಸಹಕರಿಸಿ ಅವರ ಕಾರ್ಯಗಳಿಗೆ ನೆರವಾದವರು.

ಹಾಲೇಶಪ್ಪ ಮೇಷ್ಟ್ರು ಎದುರು ಈಗಲೂ ಕುಳಿತು ಮಾತನಾಡಿದರೆ ಇವರು ಹೈಸ್ಕೂಲ್ ಶಿಕ್ಷಕರು ಎನಿಸುವುದಿಲ್ಲ. ಇವರ ವಿದ್ವತ್‌ನ್ನು ನೋಡಿದರೆ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಂತೆ ಕಾಣುತ್ತಾರೆ. ಸರ್ಕಾರಿ ಶಾಲೆಯ ಮಕ್ಕಳ ಉಜ್ವಲ ಬದುಕಿಗಾಗಿ ಅವರ ಪಟ್ಟ ಶ್ರಮ, ಅನುಸರಿಸಿದ ಕಾರ್ಯಗಳು ಮಾದರಿಯಾಗಿವೆ. ಪತ್ನಿ, ಮಗ, ಸೊಸೆ ಮೊಮ್ಮೊಕ್ಕಳೊಂದಿಗೆ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ.

# ನಾನು ಎಂದೆಂದಿಗೂ ಬಸವಾದಿ ಶರಣರ ಅನುಯಾಯಿ

**ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ । ಸಿದ್ದೇಶ್ವರ ಸ್ವಾಮೀಜಿಗಳ ಬದುಕೇ ನಮಗೆ ಆದರ್ಶ. ಅವರ ಆಶಯದಂತೆ ಬದುಕುವುದೇ ಅವರಿಗೆ ಸಲ್ಲಿಸುವ ದೊಡ್ಡ ನಮನ**

**ಹಂಪಿ ಟೈಮ್ಸ್ ವಿಜಯಪುರ**

ಸಿದ್ದೇಶ್ವರ ಸ್ವಾಮೀಜಿಗಳ ಬದುಕೇ ನಮಗೆ ಆದರ್ಶ. ಅವರ ಜೀವನದ ಆಶಯದಂತೆ ಬದುಕುವುದೇ ಅವರಿಗೆ ಸಲ್ಲಿಸುವ ದೊಡ್ಡ ಗೌರವ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿದ್ದೇಶ್ವರ ಸ್ವಾಮೀಜಿಗಳಿಗೆ ಗುರುನಮನ ಸಲ್ಲಿಸಿದರು.

ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ಸಿದ್ದೇಶ್ವರ ಮಹಾಸ್ವಾಮೀಜಿಗಳಗುರುನಮನಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಾನು ಇವತ್ತಿಗೂ–ಯಾವತ್ತಿಗೂ ಬಸವಾದಿ ಶರಣರ ಅನುಯಾಯಿ. ಸಿದ್ದೇಶ್ವರ ಸ್ವಾಮೀಜಿ ಬಸವಣ್ಣನವರ ರೀತಿಯಲ್ಲೇ ಜಾತಿ ಮತ್ತು ವರ್ಗ ರಹಿತ ಸಮ ಸಮಾಜಕ್ಕಾಗಿ ಶ್ರಮಿಸಿದವರು ಎಂದು ತಮ್ಮ ಒಳಹನ್ನು ತೆರೆದಿಟ್ಟರು.

ಸಿದ್ದೇಶ್ವರ ಸ್ವಾಮಿಗಳು ಜ್ಞಾನ ಸಂಪಾದಿಸಿದರು. ಆ ಜ್ಞಾನವನ್ನು ಜನಮಾನಸಕ್ಕೆ ಹಂಚಿದರು. ದ್ವೇಷ, ಅಹಂಕಾರದಿಂದ ಬಿಡುಗಡೆ ಹೊಂದಿದ ಅತ್ಯುನ್ನತ ಮನುಷ್ಯತ್ವದ ಸೃಷ್ಟಿಗೆ ಶ್ರಮಿಸಿದವರು. ಇವರ ಬದುಕು



ಮತ್ತು ಸಾಧನೆಯನ್ನು ವರ್ಣಿಸಲು ಪದಗಳೇ ಇಲ್ಲ. ಅಷ್ಟು ಸರಳತೆ ಅವರ ಬದುಕು ಮತ್ತು ವ್ಯಕ್ತಿತ್ವದಲ್ಲಿ ಬೆರೆತಿತ್ತು ಎಂದು ವಿವರಿಸಿದರು. ಧರ್ಮಾತೀತವಾಗಿ ಪ್ರತಿಯೊಬ್ಬರೂ ಬಾಳಬೇಕು ಎನ್ನುವುದು ಸಿದ್ದೇಶ್ವರ ಸ್ವಾಮಿಗಳ ಆಶಯವಾಗಿತ್ತು. ಸಮಾಜದ ಜಾತಿ ಮೈಲಿಗೆಯನ್ನು ಸೋಕಿಸಿಕೊಳ್ಳದೆ ದೂರ ಉಳಿದಿದ್ದ ದಾರ್ಶಕನಿಕರು. ಸಮಾಜದಲ್ಲಿ ದೂರದರ್ಶಿತ್ವ ಇಟ್ಟುಕೊಂಡು ಮನುಷ್ಯ ಸಮಾಜವನ್ನು ತಿದ್ದುವ ಗುರಿ ಹೊಂದಿದ್ದ ಕಾರಣಕ್ಕೇ ಇವರು ದಾರ್ಶನಿಕರಾಗಿದ್ದರು ಎಂದು ವಿವರಿಸಿದರು. ಜಿಲ್ಲೆಯ ಸಚಿವರು ಮತ್ತು ಸಂತರು ಹೇಳಿದ ರೀತಿಯಲ್ಲಿ ಸಿದ್ದೇಶ್ವರ ಶ್ರೀಗಳ ಬದುಕಿನ ಸಂದೇಶ ಮತ್ತು ಆದರ್ಶಗಳನ್ನು ಕಾಪಾಡುವ ಸ್ಮರಣಾರ್ಥ ಕಾರ್ಯ ಮಾಡಲು ಸರ್ಕಾರ ಸಿದ್ದವಿದೆ ಎಂದು ಭರವಸೆ ನೀಡಿದರು.

ಸಿದ್ದೇಶ್ವರ ಸ್ವಾಮಿಗಳಿಗೆ ಗುರುನಮನ ಸಲ್ಲಿಸುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ. ಸಿದ್ದೇಶ್ವರ ಸ್ವಾಮಿಗಳ ಬಗ್ಗೆ ನನಗೆ ವಿಶೇಷ ಗೌರವ ಮತ್ತು ಪ್ರೀತಿ. ಸಿದ್ದಗಿರಿ ಕನ್ನೇರಿಮಠ ಕೊಲ್ಲಾಪುರದ ಅದೃಶ್ಯ ಕಾಡಸಿದ್ದೇಶ್ವರ ಮಹಾ ಸ್ವಾಮೀಜಿಗಳು, ಸಿರಿಗಿರೆಯ ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು, ಶಿವಮೂರ್ತಿ ಶಿವಾಚಾರ್ಯ ಮಹಾ ಶ್ರೀಗಳು, ಜ್ಞಾನಯೋಗಾ ಶ್ರಮದ ಬಸವಲಿಂಗ ಮಹಾಸ್ವಾಮೀಜಿಗಳು ಮತ್ತು ಹಲವು ಸಿದ್ದ ಸಂತರ ಸಾನ್ನಿಧ್ಯದಲ್ಲಿ ಲಕ್ಷಾಂತರ ಅನುಯಾಯಿಗಳ ಸಮ್ಮುಖದಲ್ಲಿ ಗುರುನಮನ ಕಾರ್ಯಕ್ರಮ ಉದ್ಘಾಟನೆಯಾಯಿತು.

ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲ್ ಮತ್ತು ಸಚಿವರಾದ ಎಚ್.ಕೆ.ಪಾಟೀಲ್, ಶಿವಾನಂದ ಪಾಟೀಲ್, ಮಾಜಿ ಸಚಿವರಾದ ಶಾಸಕ ವಿನಯ್ ಕುಲಕರ್ಣಿ ಮತ್ತು ಶಾಸಕರಾದ ಸಿ.ಎಸ್.ನಾಡಗೌಡ, ಅಶೋಕ್ ಮನಗೋಳಿ ಸೇರಿ ಹಲವು ಪ್ರಮುಖರು ಗುರುನಮನಕ್ಕೆ ಸಾಕ್ಷಿಯಾದರು.

## ಕವಿ ಮನಸು

### ಹೊಸ ವರ್ಷ ಹೊಸ ನಾವು

ನಾಳೆಯೆಂಬ ಮೊಹರು ಹಾಕಿದ
ಲಕೋಟೆಯೊಂದಿಗೆ
ಏನಿಲ್ಲ, ಏನಿಹುದೆಂಬ ರಹಸ್ಯದೊಂದಿಗೆ
ಬಂದಿಹುದು ಹೊಸವರ್ಷ ಮತ್ತೊಮ್ಮೆ
ನಿಗೂಢದಲ್ಲವಿತಿಹುದು ಭವಿಷ್ಯದ ಸ್ವಾರಸ್ಯ
ಭೂತಕ್ಕಿಂತ ದೊಡ್ಡದು ಭವಿತವ್ಯ
ಒಳಿತಾಗದಿದ್ದವನ್ನು ತ್ಯಜಿಸಿದರಾಯಿತು
ಲೇಸಾದ್ದನ್ನು ಬೆಳಿಸಿಕೊಂಡರಾಯಿತು
ತೀರಕ್ಕಪ್ಪಳಿಸುವ ಕಡಲ ಅಲೆಗೆ
ಮುಹೂರ್ತವೇ
ಬದ್ಧತೆಯೊಂದಿದ್ದರೆ ನಿರ್ಣಯ ಬೇಕೇ
ಇತಿಮಿತಿಗಳಿಗೆ ಬಳಸೋಣ ಆತ್ಮವಿಶ್ವಾಸದ
ಕೀಲೀಕೈ
ಬದಲಾಗದು ಬದುಕು ಮಾಂತ್ರಿಕತೆಯಿಂದ
ಯಾವ ದಿಕ್ಕು, ಎತ್ತ ಯಾನ ಸ್ಪಷ್ಟತೆಯಲಿ
ಜಾಣ್ಮೆಯಲಿ ದೋಣಿ ಹಾಯಿಸುವದೇ ಸರಿ
ನಿರೀಕ್ಷೆಗಳಿಲ್ಲದೆ
ಅಪೇಕ್ಷೆ ನಿರೀಕ್ಷೆಗಳನ್ನಿಡೇರಿಸುವ ಯಾವ
ಕ್ಯಾಲೆಂಡರ್ ಇದೆ
ನಮ್ಮ ಹೊಸ ಭವಿಷ್ಯ ನಮ್ಮಿಂದಲೇ
ಜಗದಲಿ ತಾರತಮ್ಯವಿಲ್ಲದ ಎಲ್ಲರಿಗೂ
ಸಿಗುವುದು 365 ದಿನಗಳು
ನಮ್ಮ ಬದುಕಿನ ಪರಿಷ್ಕರಣೆಗೆ ಸಾಕಲ್ಲವೇ..
ಹೊಸ ವರ್ಷದ ಹಾರ್ದಿಕ ಶುಭಾಶಯಗಳು

**– ಡಾ. ಸಂಧ್ಯಾ ಹೆಚ್. ಎಸ್.**

### ವರುಷ – ಹರುಷ

ಸಂಕಲನವಾಗುತ್ತಿವೆ ವರ್ಷಗಳು
ಎಲ್ಲರ ಮನೆಯಲ್ಲೂ ಬದಲಾಗುತ್ತಿವೆ
ಬಣ್ಣ ಬಣ್ಣದ ಕ್ಯಾಲೆಂಡರಗಳು

ಒಂದೆಡೆಗುಪ್ಪೆ ಹಾಕಿ
ಅಳೆದು, ತೂಗಿ ಲೆಕ್ಕ ಹಾಕಿದ
ಕಬಸುಗಳಿಗೆಲ್ಲಾ ಮತ್ತೇ ಹುರುಪು


ಕಂಡ ಕನಸುಗಳೆಲ್ಲಾ
ವಿಲೇವಾರಿಯಾಗಲಿ ಅನ್ನುವ
ಆಶಯ ನಮ್ಮದು

ವಿಲೇವಾರಿಯಾಗದ ಕನಸಿಗೂ
ಚಿಂತೆಬೇಡ
ಮತ್ತೇ ಬದಲಾಗುತ್ತವೇ ಕ್ಯಾಲೆಂಡರಗಳು.

ಬಂದಿಹುದು ಹೊಸ ವರುಷ
ತಂದಿಹುದು ಹೊಸ ಹರುಷ
ಇರಲಿ ಸಿಹಿ ಕಹಿಗಳ ಮಿಶ್ರದ ಮಾಸ.

**– ನಾಗರಾಜನಾಯಕ ಡಿ.ಡೊಳ್ಳಿನ**
**ಕೊಪ್ಪಳ**

## ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 02-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.07 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.278 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.39ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8694 ಕ್ಯುಸೆಕ್ |
| ಸಾಮರ್ಥ್ಯ | 74.518 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಮ್ಮ ಶಾಲೆಗೆ ಏ ಹೊಸಾ ಟೀಚರ್ ಬಂದ್ರು...

## ಕನ್ನಡ ಮಾತಾಡೋ ಶೈಲೀನ ಬ್ಯಾರೆ ಐತಿ ನೋಡ್ರೀ. ಅಂದಂಗ ನನ್ ಕನ್ನಡಾನ ನಿಮಿಗೆಲ್ಲ ಓದಾಕ ತ್ರಾಸ ಆಗಿಲ್ಲ್ ಅಲ್ರೀ

**'ಏ ಹೊಸಾ ಟೀಚರ್ ಬಂದಾರೆ ಯಾ ಸಬ್ಜೆಕ್ಟ್ ತಗೋತರೋ ಏನೋ'** ಅಂತ ಮಕ್ಕಳೆಲ್ಲ ತರಗತಿ ಬಾಗಿಲದಾಗ ಗುಂಪಾಗಿ ಆಫೀಸ್ ರೂಮ್ ಕಡೀಗೆ ನೋಡಾಕತ್ತಿದ್ದು ಇವತ್ತಿಗೂ ಮರೀವಲ್ದು ನೋಡ್ರೀ... ಎಲ್ಲಾ ಕೆಲಸಕ್ಕೂ ಮ್ಯಾಲ ನಮ್ಮ ಮೇಷ್ಟ್ರು ಕೆಲ್ಸ ಅಂತಾ ಮೇಷ್ಟ್ರು ಕೆಲ್ಸ ಮಾಡಾಕ ಬಂದ ದಿವ್ಸ ಕೇಳಿದ್ದ ಈ ಮಾತ್ಗಳು ಇನ್ನೂ ಕಿವ್ಯಾಗ ಅದಾವ್ರೀ...

ನಮ್ಮೂರು ಹಾವೇರಿ ತಾಕ ಹಳ್ಳಿ.. ಆದ್ರೂ ನಾ ಓದಾಕಂತ ಬ್ಯಾರೆ ಬ್ಯಾರೆ ಊರಾಗ ಇದ್ದಾಕಿ. ಅದಕ ನಾ ಮಾತಾಡೋವಾಗ ಬ್ಯಾರೆ ಬ್ಯಾರೆ ತರದ್ದ ಕನ್ನಡ ಬಂದು ಹೊಕ್ಕತಿ. ಆದ್ರೂ ನಾ ಡಿ.ಎಡ್ ಧಾರವಾಡದಾಗ ಮಾಡಿದ್ನೆಲ್ಲ ಅದಕ ಸ್ವಲ್ಪ ಜಾಸ್ತಿ ಧಾರವಾಡ ಕನ್ನಡ ಇರ್ತೈತಿ. ನಾ ಸಾಲಿಗೆ ಪಾಠ ಮಾಡಾಕ ಬಂದಾಗ ನಮ್ ಸಾಲಿ ಹುಡ್ರು 'ಟೀಚರ್ ನೀವು ಹಳ್ಳೀ ಊರೋರ್ ಏನ್ರೀ ಅಂತ ಕೇಳಿದ್ರು.. ನಾನು ಇಲ್ಲಪಾ ಇದು ಧಾರವಾಡ ಕಡೇ ಮಾತಾಡೋ ಕನ್ನಡ ಅಂದೆ. ಅದಕ್ಕವ್ರು ಇಲ್ರೀ ನಮ್ಮೂರು ನೋಡಾಕ ಹಳ್ಳೀ ಮಂದಿ ಬರ್ತಾಲಲ್ರೀ ಅವ್ರೂ ಹಿಂಗ ಮಾತಾಡ್ತಾರ ಅಂದ್ರು. ಯಾಕಂದ್ರ ಆ ಊರು ಒಂದು ಪ್ರವಾಸಿ ತಾಣ. ನನಿಗೇ ಚಲೋ ಆತು ನಿಮಿಗೆ ನನ್ ಭಾಷೆ ಅರ್ತ ಅಕ್ಕೈತಿ ಹಂಗಾರ ಅಂತಂದು ಖುಷಿ ಪಟ್ಟೆ. ಆದ್ರ ನಾವು ಏನಾರ ಮಾತಾಡ್ಲಿ ಪಾಠ ಮಾಡೋ ಮುಂದ, ಬರಿಯೋ ಮುಂದ ಪುಸ್ತಕದಾಗ ಹೆಂಗ ಇರ್ತೈತೋ ಅದ್ನ ಓದಿ ಬರೀಬಕು. ಇದ ನೋಡ್ರಿ ತ್ರಾಸ ಆಗಿದ್ದು.



**ಸುಜಾತ ಗಿಡ್ಡಪ್ಪಗೌಡ್ರು**
**ಶಿಕ್ಷಕರು, ಹೊಸಪೇಟೆ**

ಒಮ್ಮೆ 2 ನೇ ಕ್ಲಾಸಿಗೆ ಟೆಸ್ಟ್ ಇಟ್ಟಿದ್ದೆ. ಅವ್ನನು 'ಕಪ್ಪೆ' ಚಿತ್ರಕ 'ಕೊಪ್ಪೆ' ಅಂತ ಬರದಿದ್ದ. ಅಲ್ಲಪಾ ತಮ್ಮ ನೀ ಏನಾರ ಮಾತಾಡು ಆದ್ರ ಸಾಲ್ಯಾಗ ಬರಿಯೋ ಮುಂದ ನಾ ಹೇಳಿ ಕೊಟ್ಟಿದ್ನೆಲ್ಲ ಕಪ್ಪೆ ಅಂತ ಅದ್ನ ಬರೀಬಕಪ ಅಂತ ಹೇಳಿದೆ. ಅವ್ರೆಲ್ಲ ಕ ಬದ್ಲಿಗೆ ಕೊ ಅಂತಿದ್ರು. ಕಬ್ಬಿಗೆ ಕೊಬ್ಬು, ಕಲ್ಲಿಗೆ ಕೊಲ್ಲು ಅಂತಿದ್ರು, ಅದ್ನ ಬರಿತಿದ್ರೂ. ಅವ್ರಿಗೆ ಆ ಶಬ್ದ ಅಪಾರ್ಥ ಕೊಡ್ತೈತಿ ಅಂತ ಹೇಳೋದ್ರೊಳಗ ಸಾಕಾಗಿತ್ತು.

ಇವ್ರೆಲ್ಲ ಗಡಿ ಭಾಗಕ್ಕ ಹತ್ರ ಇರೋರು. ಇಲ್ಲಿ ಮನ್ಯಗ ತೆಲುಗು ತಮಿಳು ಮಾತಾಡೋರು ಜಾಸ್ತಿ. ಹಿಂಗ ಒಮ್ಮೆ 3 ನೇ ಕ್ಲಾಸ್ ಹುಡುಗೀನು 'ಹಸು' ಬದ್ಲಿ 'ಅಸ್ಸು' ಅಂತ ಬರದಿದ್ಲು. ಅಕಿಗೇ ಹತ್ತು ಸಲ ಹಸು ಅಂತ ಹೇಳಿ ಹೇಳಿ ಅಭ್ಯಾಸ ಮಾಡು ಅಂದ್ರ ಅಕಿ 10 ಸಲಾನು ಅಸ್ಸು ಅಸ್ಸು ಅನಾಕಿ...

ಹಿಂಗ ನಾವು ಮನ್ಯಾಗ ಮಾತಾಡೋ ಪದಾನೇ ಸಾಲ್ಯಾಗ ಓದೋ ಮುಂದ ಬರಿಯೋ ಮುಂದ ಬಾಳ ಸಲ ಬಳಸ್ತೀವಿ. ನಮ್ಮ್ ಸಾಲಿ ಹುಡ್ರಿಗೇ ಒಂದು ಚಿತ್ರ ಕೊಟ್ಟು ಇದರ ಬಗ್ಗೆ ನಿಮ್ಮ ಅನಿಸಿಕೆ ಹೇಳ್ರೀ, ಈ ಶಬ್ದಕ್ಕ ಒಂದು ವಾಕ್ಯ ಹೇಳ್ರೀ ಅಂದ್ರ ಸಾಕು ಅವ್ರು ತಾವ್ ಮಾತಾಡೋಂಗ ಹೇಳಿ ಬಿಡ್ತಾರ. ಆಮೇಲೆ ನಾವು ಮಾಸ್ತರ ಆದೋರು ಅದನ್ನ ತಿದ್ದಿ, ತೀಡೀ,ಪದನೆಲ್ಲಾ ಸರಿ ಮಾಡಿ ಹೇಳಬಕಾಕ್ಕತಿ.

ಅದಕ್ಕ ನಾನು ವಾರದಾಗ 2–3 ಸಲ ಇವ್ರಿಗೆಲ್ಲ ಚಲೋ ಕಥಿ ಪುಸ್ತಕ ಓದಾಕ ಹಚ್ಚತಿನಿ. ಮತ್ತ ನಾಲಿಗಿ ಸುರುಳಿ ಅಂತಾ ಇರ್ತಾವಲ್ಲ 'ಕೆಂಪು ಕುಂಕುಮ ಕಪ್ಪು ಕುಂಕುಮ' ಅಂತ ಅವನ್ನೂ ಹೇಳಸ್ತಿನಿ. ಆದ್ರೂ ನಮ್ ಮಾಸ್ತರ್ ಪಜೀತಿ ಯಾರ್ಗೂ ಬ್ಯಾಡ ಬಿಡ್ರೀ..

ಭಾಷಿ ಅನ್ನೋದು ಒಂದ್ ಇಲ್ಲದ್ರ ನಾವು ಮನಸ್ಯಾರು ಪ್ರಾಣಿ ಗತೆ ಇರ್ತಿದ್ವೇನೋ ಅಲ್ವಾ.... ನಮ್ಮ್ ಕರ್ನಾಟಕದಾಗ 10–10 ಕಿ. ಮೀ ಗೂ ಕನ್ನಡ ಮಾತಾಡೋ ಶೈಲೀನ ಬ್ಯಾರೆ ಐತಿ ನೋಡ್ರೀ. ಅಂದಂಗ ನನ್ ಕನ್ನಡಾನ ನಿಮಿಗೆಲ್ಲ ಓದಾಕ ತ್ರಾಸ ಆಗಿಲ್ಲ್ ಅಲ್ರೀ. ಅದೆಂಗ ಅಕ್ಕೈತಿ. ಬರದಂಗ ಓದಾ ಒಂದಾ ಒಂದು ಭಾಷೆ ಅಂದ್ರ ಅದ್ ನಮ್ಮ್ ಕನ್ನಡ ಒಂದಾ ನೋಡ್ರೀ. ನಾ ಬರದಂಗ ನೀವು ಓದಿದ್ರ ನಿಮಗೂ ನಮ್ಮ್ ಕಡೀ ಕನ್ನಡ ಮಾತಾಡಾಕ ಬಂದಂಗ ಬಿಡ್ರೀ..

ನಮ್ಮವ್ವ ಕನ್ನಡ ತಾಯಿ ಎಲ್ಲಾರ್ಗೂ ಒಳ್ಳೇದು ಮಾಡ್ಲಿ.. ಶರಣೋ ಶರಣು...

# ವಿಜ್ಞಾನ ಸಂವಹನ-ಸಮ್ಮೋಹನ

## ಶಿಕ್ಷಕರ ಗೊಂದಲಗಳಿಗೆ "ಕನ್ನಡದಲ್ಲಿ ವಿಜ್ಞಾನ" ಹೆಸರಿನಲ್ಲಿ ನಾಗೇಶ ಹೆಗಡೆ ಮತ್ತು ಟಿ.ಜಿ. ಶ್ರೀನಿಧಿಯವರ ನಡೆಸಿದ ವಿಜ್ಞಾನ ಸಂವಹನ ಕಾರ್ಯಾಗಾರ





ಅದೊಂದು ಶಾಲೆಯ ಆವರಣ. ಅಲ್ಲಿ ನೂರಕ್ಕೂ ಹೆಚ್ಚು ವಿಜ್ಞಾನ ಶಿಕ್ಷಕರು ಸೇರಿದ್ದಾರೆ. ಅವರ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು, ಗೊಂದಲಗಳು ಏಳುತ್ತವೆ. ಕೆಲವರಿಗೆ ತರಗತಿ ಪ್ರವೇಶಕ್ಕಿಂತ ಮುಂಚೆ ಸಿದ್ಧತೆ ಮಾಡುವಾಗ ಕೆಲವು ಪ್ರಶ್ನೆಗಳು ಕಾಡುತ್ತವೆ. ಇನ್ನು ಕೆಲವರಿಗೆ ಬೋಧನೆ ಮಾಡುತ್ತಿರುವ ಸಮಯದಲ್ಲಿ ಗೊಂದಲ ಮೂಡುತ್ತದೆ. ಇನ್ನು ಕೆಲವರಿಗೆ ಬೋಧನೆ ನಂತರ ವಿದ್ಯಾರ್ಥಿಗಳು ಕೇಳುವ ಸವಾಲಿನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲು ಆಗುತ್ತಿಲ್ಲ. ಇವಕ್ಕೆಲ್ಲ ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವ ಹಂಬಲ ಆ ವಿಜ್ಞಾನ ಶಿಕ್ಷಕರಲ್ಲಿ ಮನೆ ಮಾಡಿರುವುದು ಸ್ಪಷ್ಟವಾಗಿ ಗೋಚರವಾಗಿತ್ತು. ಶಿಕ್ಷಕರ ಎಲ್ಲಾ ಗೊಂದಲಗಳಿಗೆ "ಕನ್ನಡದಲ್ಲಿ ವಿಜ್ಞಾನ"ಹೆಸರಿನಲ್ಲಿ ನಾಗೇಶ ಹೆಗಡೆ ಮತ್ತು ಟಿ.ಜಿ. ಶ್ರೀನಿಧಿಯವರ ನಡೆಸಿದ ವಿಜ್ಞಾನ ಸಂವಹನ ಕಾರ್ಯಾಗಾರ ಒಂದು ರೀತಿ ಆಶಾ ಕಿರಣವಾಯಿತು.

ವಿಜ್ಞಾನ ನಿಂತ ನೀರಲ್ಲ. ಅದು ಸದಾ ಚಲನಶೀಲ ಗುಣವನ್ನು ಹೊಂದಿದೆ. ಅದರ ಫಲವಾಗಿ ನಿನ್ನೆ ಸತ್ಯವಾದ ಸಂಗತಿ ಇಂದು ಸುಳ್ಳಾಗುತ್ತದೆ. ಇಂದು ನಂಬಲು ಅಸಾಧ್ಯವಾದದ್ದು ನಾಳೆ ಸತ್ಯವಾಗಿರುತ್ತದೆ. ವಿಜ್ಞಾನ ಮತ್ತು ಸಂಶೋಧನೆಯ ಸಂವಾಹನವು ಸಾಮಾನ್ಯವಾಗಿ ಆಂಗ್ಲ ಭಾಷೆಯಲ್ಲಿರುತ್ತದೆ. ವಿಜ್ಞಾನದ ಹೊಸದಾದ ವಿಷಯಗಳು ತಕ್ಷಣವೇ ನಮ್ಮ ಜನರಿಗೆ ತಲುಪುತ್ತಿಲ್ಲ. ಕೆಲ ಸಮಯದ ನಂತರಅದನ್ನುಸ್ಥಳೀಯಭಾಷೆಗೆಅನುವಾದಿಸಲಾಗುತ್ತದೆ. ನಮ್ಮ ಜನರಿಗೆ ಅದು ತಲುಪುವ ಸಮಯಕ್ಕೆ ಅದು ಮತ್ತಷ್ಟು ಬೆಳೆದಿರುತ್ತದೆ ಅಥವಾ ಬದಲಾಗಿರುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಇಂತಹ ವಿಜ್ಞಾನ ಜನ ಸಾಮಾನ್ಯರಿಗೆ ಸುಲಭವಾಗಿ ತಲುಪುವುದು ಮತ್ತು ತಕ್ಷಣವೇ ಕೈಗೆ ನಿಲುಕುವುದು ಒಂದು ಬಗೆಯಾದರೇ, ಮಕ್ಕಳಿಗೆ ಸಮರ್ಪಕವಾಗಿ ತಲುಪುವುದು ಮತ್ತೊಂದು ಬಗೆಯಾಗಿದೆ. ಮಕ್ಕಳಿಗೆ ತಲುಪಿಸುವಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಅದಕ್ಕೆ ಶಿಕ್ಷಕರು ಹೆಚ್ಚು ಅಧ್ಯಯನ ಮಾಡುವುದರ ಜೊತೆಗೆ ಆಗುತ್ತಿರುವ ಬದಲಾವಣೆಗಳನ್ನು ಸೂಕ್ಷ್ಮಗ್ರಹಿಕೆ ಮೂಲಕ ಅವಲೋಕಿಸುತ್ತಲೇ ಇರಬೇಕು. ಇಲ್ಲವಾದಲ್ಲಿ ಮಕ್ಕಳಿಗೆ ವಿಜ್ಞಾನ ಕಟ್ಟಿ ಕೊಡುವಲ್ಲಿ ಸೋಲನ್ನು ಅನುಭವಿಸುದರ ಜೊತೆಗೆ, ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅದಕ್ಕೆ ವಿಜ್ಞಾನ ಶಿಕ್ಷಕರು ಅತ್ಯುತ್ತಮ ಸಂವಹನಕಾರರಾಗಬೇಕಾಗುತ್ತದೆ ಎನ್ನುವ ಆಶಯವೇ ಕಾರ್ಯಾಗಾರ ಆಯೋಜನೆಗೆ ಮೂಲ ಪ್ರೇರಣೆಯಾಗಿತ್ತು.

ಸಂವಹನ ಎಂದರೇನು? ವಿಜ್ಞಾನದಲ್ಲಿ ಸಂವಹನ ಹೇಗೆ ಭಿನ್ನವಾಗಿದೆ? ವಿಜ್ಞಾನದಲ್ಲಿ ಸಂವಹನಕಾರರು ಏಕೆ ಅತ್ಯಗತ್ಯವಾಗಿದ್ದಾರೆ? ಉತ್ತಮ ವಿಜ್ಞಾನ ಸಂವಹನಕಾರ ಲಕ್ಷಣಗಳಾವುವು? ಯಾವ ವಿಷಯ ಆಯ್ಕೆ ಮಾಡಿಕೊಳ್ಳಬೇಕು? ಸಂವಹನವನ್ನು ಹೇಗೆ ಮಾಡಬೇಕು? ಸಂವಹನಕಾರರಿಗೆ ಇರುವ ವೇದಿಕೆಗಳಾವುವು? ಇಂತಹ ಪ್ರಶ್ನೆಗಳಿಗೆ ಮೊದಲು ಉತ್ತರಗಳನ್ನು ಕಂಡುಕೊಳ್ಳಬೇಕು ಎನ್ನುವುದಕ್ಕೆ ಇಲ್ಲಿ ಮೊದಲ ಆದ್ಯತೆ ನೀಡಲಾಗಿತ್ತು. ಕಳುಹಿಸುವವರ ಮತ್ತು ಪಡೆಯುವವರ ನಡುವೆ ಸಂವಹನಕಾರ ಬರುವುದರ ಜೊತೆಗೆ ಅವರ ಮಧ್ಯ ನಡೆಯುವ ಸಂವಹನವು ಭಾಷಾ ಮಾಧ್ಯಮವೂ ಮಹತ್ವದ್ದಾಗಿರುತ್ತದೆ. ಕ್ಲಿಷ್ಟ ವಿಜ್ಞಾನದ ಪರಿಕಲ್ಪನೆ ಸಾಮಾನ್ಯನೂ ಅರ್ಥೈಸಲು ವಿಜ್ಞಾನ ಸಂವಹನ ಅತ್ಯಗತ್ಯವಾಗಿ ಬೇಕಾಗುತ್ತಾನೆ. ಏಕೆ? ಹೇಗೆ? ಎಲ್ಲಿ? ಯಾವಾಗ? ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದೇ ಉತ್ತಮ ವಿಜ್ಞಾನ ಸಂವಹನಕಾರರ ಲಕ್ಷಣಗಳು. ಪ್ರಸ್ತುತ ಸನ್ನಿವೇಶದ ಘಟನೆಗಳು, ವಿಶೇಷ ದಿನಗಳು, ಸಾಧನೆಗಳ ಕುರಿತು ಹೆಚ್ಚು ಮಹತ್ವ ನೀಡಬೇಕಿದೆ. ಸಾಮಾಜಿಕ ಜಾಲತಾಣಗಳು, ಫೇಸ್ಬುಕ್, ಟ್ವೀಟರ್, ಇನ್ಸ್ಟಾಗ್ರಾಮ್, ಬ್ಲಾಗ್, ಆನ್ಲೈನ್ ಪೇಪರ್, ವಾಟ್ಸಪ್, ಈ ಬುಕ್ ಮುಂತಾದವನ್ನು ಬಳಸಿ ಸಂವಹನ ಮಾಡಬಹುದಾಗಿದೆ ಎನ್ನುವ ಅಂಶಗಳನ್ನು ಕಾರ್ಯಾಗರದ ಶಿಕ್ಷಕರಿಗೆ ಮೊದಲಿಗೆ ಟಿ.ಜಿ.ಶ್ರೀನಿಧಿಯವರು ಮನವರಿಕೆ ಮಾಡಿದ್ದು ವಿಶೇಷವಾಗಿತ್ತು.

ಮಕ್ಕಳಿಗೆ ವಿಜ್ಞಾನದ ಕುರಿತಾಗಿ ಕುತೂಹಲ ಹೆಚ್ಚಿಸುವಂತಹ ವಾತಾವರಣ ನಿರ್ಮಾಣ ಮಾಡಿದರೆ ಅವರಲ್ಲಿ ಆಸಕ್ತಿ ಬೆಳೆಯುತ್ತದೆ. ಇದಕ್ಕೆ ವಿಜ್ಞಾನದ ವಿಷಯಗಳನ್ನು ಕಥೆ, ಪದ್ಯ, ಒಗಟು, ದೃಶ್ಯ, ಗಾಯನ ಸೇರಿ ಹಲವು ಪ್ರಕಾರಗಳಲ್ಲಿ ಬೋಧಿಸಬಹುದು. ಈ ರೂಪಕಗಳನ್ನು ಬಳಸಿದಲ್ಲಿ ಮಕ್ಕಳ ಮನಸ್ಸಿನಲ್ಲಿ ಅದು ಅಚ್ಚಳಿಯದಂತೆ ಉಳಿಯುತ್ತವೆ. ಮಕ್ಕಳಿಗೆ ವಿಜ್ಞಾನ ವಿಷಯವನ್ನು ವಿಜ್ಞಾನ ಗೀತೆಗಳ, ಕಥಾ ರೂಪಕಗಳ ಮೂಲಕ ಸ್ವಾರಸ್ಯಕರ, ಸರಳವಾಗಿ ಹೇಳುವದನ್ನು ಶಿಕ್ಷಕರು ಯಾವ ರೀತಿ ಅಳವಡಿಸಿಕೊಳ್ಳಬಹುದು ಎಂಬುದಕ್ಕೆ ಉದಾಹರಣೆಯಾಗಿ, ಪ್ರತಿಯೊಂದು ಜೀವಿಗೂ ನೀರು ಅಗತ್ಯ, ಪರಿಸರದಲ್ಲಿ ನೀರು ಮೇಲಿನಿಂದ ಕೆಳಕ್ಕೆ ಹರಿಯುತ್ತದೆ. ಆದರೆ ಜೀವಿಗಳಲ್ಲಿ ನೀರು ವಿರುದ್ಧ ದಿಕ್ಕಿನಲ್ಲಿ ಚಲನೆಯಾಗುತ್ತದೆ ಎನ್ನುವುದನ್ನು ಸೇರಿದಂತೆ ಹಲವು ಉದಾಹರಣೆಗಳ ಮೂಲಕ ನಾಗೇಶ ಹೆಗಡೆಯವರು ತಿಳಿಸಿದ ರೀತಿ ಶಿಕ್ಷಕರಲ್ಲಿ ರೋಮಾಂಚನವನ್ನುಂಟುಮಾಡಿತ್ತು. ವಿಜ್ಞಾನ ಶಿಕ್ಷಕರು ಹೇಳುವ ಪ್ರತಿ ಮಾತು ವೈಜ್ಞಾನಿಕತೆ ಇದೆಯೋ? ಇಲ್ಲವೇ? ಅದನ್ನು ಉಲ್ಲೇಖಿಸುವ ಮುನ್ನ ಸರಿಯಾಗಿ ಮನನ ಮಾಡಿಕೊಳ್ಳಬೇಕು. ವೈಜ್ಞಾನಿಕ ಸಂಗತಿಗಳನ್ನ ಪರೀಕ್ಷೆ ಮಾಡಿ ತೆಗೆದುಕೊಳ್ಳಬೇಕು. ಪರೀಕ್ಷೆ ಮಾಡುವುದು ಶಿಕ್ಷಕರಿಗೆ ತಿಳಿದಿರಬೇಕು. ವಿಜ್ಞಾನ ಶಿಕ್ಷಕನ ಕೆಲಸ ಪಠ್ಯಪುಸ್ತಕದಲ್ಲಿರುವುದನ್ನು ಬೋಧನೆ ಮಾಡುವುದು ಅಷ್ಟೇ ಅಲ್ಲ, ಅಷ್ಟೇ ಆಗಿದ್ದರೆ ಶಿಕ್ಷಕರ ಅಗತ್ಯವೇ ಇರುತ್ತಿರಲಿಲ್ಲ. ಅದನ್ನು ರಸವತ್ತಾಗಿ, ಸ್ವಾರಸ್ಯಕರವಾಗಿ, ಆಸಕ್ತಿ ಮೂಡುವಂತೆ ಮಾಡುವುದು ಶಿಕ್ಷಕರ ಆಸಕ್ತಿಯನ್ನು ಆಲಂಬಿಸಿದೆ ಎನ್ನುವ ಅಂಶಗಳು ನಾಗೇಶ ಹೆಗಡೆಯವರ ಜೊತೆ ಚರ್ಚೆಯಲ್ಲಿ ಮುನ್ನಲೆಗೆ ಬಂದವು.

ಕೊನೆಯಲ್ಲಿ 'ಶೂನ್ಯವೇಳೆ' ರೂಪದಲ್ಲಿ ಸಂವಹನ ಮಾಡಲಾಯಿತು. ಶಿಕ್ಷಕರು ತಮ್ಮ ಸಮಸ್ಯೆಗಳನ್ನು, ಗೊಂದಲಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶ ನೀಡಲಾಯಿತು. ದಿನನಿತ್ಯ ವಿಜ್ಞಾನ ಬೆಳೆಯುತ್ತಿದೆ ಅದರಲ್ಲಿ ಯಾವುದು ಸತ್ಯವೆಂದು ನಾವು ನಂಬಬೇಕು?. ಕನ್ನಡ ಮಾಧ್ಯಮದ ಹೆಚ್ಚಿನ ವಿದ್ಯಾರ್ಥಿಗಳು ವಿಜ್ಞಾನ ವಿಷಯವನ್ನು ಅಧ್ಯಯನ ಮಾಡುವಂತಾಗಲು ಏನು ಮಾಡಬೇಕು?. ವಿಜ್ಞಾನವನ್ನು ಗದ್ಯದ ವಿವಿಧ ರೂಪದಲ್ಲಿ ಕಲಿಸುವುದು ಹೇಗೆ?. ಮೂಢನಂಬಿಕೆಯಿಂದಾಚೆಗೆ ವೈಜ್ಞಾನಿಕ ಮನೋಭಾವ ಮೂಡಿಸುವ ಬಗೆ ಹೇಗೆ?.ವಿಜ್ಞಾನದಲ್ಲಿ ದ್ವಂದ್ವಗಳಿಗೆ ನಿಖರ ಉತ್ತರ ಕಂಡುಕೊಳ್ಳುವ ಬಗೆ?. ಇಂತಹ ಹಲವಾರು ಪ್ರಶ್ನೆಗಳಿಗೆ ಶಿಕ್ಷಕರು ತಜ್ಞರಿಂದ ಉತ್ತರವನ್ನು ಪಡದು ಸಂತೃಪ್ತರಾದರು.

ಇಂದು ತಂತ್ರಜ್ಞಾನ ಬೆಳದಿದೆ. ಸಂವಹನ ಅಗತ್ಯವಿದೆ. ಅದರ ಜೊತೆಜೊತೆಗೆ ಖಚಿತಪಡಿಸಿಕೊಳ್ಳುವಿಕೆ ಅಗತ್ಯವಿದೆ. ವಿಜ್ಞಾನ ಶಿಕ್ಷಕರಾಗಿ ಅರ್ಥ ಮಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ವಿದ್ಯಾರ್ಥಿಗಳಿಗೆ ದಿನನಿತ್ಯದ ನಿದರ್ಶನಗಳನ್ನೇ ಆಡುಮಾತಿನಲ್ಲಿ ಹೇಳುವ ಮೂಲಕ ಆಸಕ್ತಿ ಬೆಳೆಸಬಹುದು. ಇವತ್ತಿನ ಸಂದರ್ಭವನ್ನು ಸೇರಿಕೊಂಡು ಹರಿಕಥೆ, ಬೀದಿನಾಟಕ, ಯಕ್ಷಗಾನ, ಲಾವಣಿ, ನಾಡು, ನುಡಿ, ತಮಾಷೆ ಪ್ರಸಂಗ ಹೀಗೆ ಬೇರೆ ಬೇರೆ ರೀತಿಯಲ್ಲಿ ಹೇಳಬಹುದು. ಜೊತೆಗೆ ಪಠ್ಯದಾಚೆ ವಿಜ್ಞಾನವನ್ನು ತರಗತಿ ಕೋಣೆಗೆ ತರುವ ವಿಧಾನಗಳು, ಸಾಂಪ್ರದಾಯಿಕ ವಿಜ್ಞಾನ ಬೋಧನೆ ಬದಲಾಗಿ ವಿಭಿನ್ನ ಚಟುವಟಿಕೆಗಳ ಮೂಲಕ ವಿಜ್ಞಾನವನ್ನು ಕಲಿಸುವ ರೀತಿಗಳು, ಸುಲಭವಾಗಿ ವಿಜ್ಞಾನ ಪ್ರಯೋಗಗಳನ್ನು ನಿರ್ವಹಿಸುವ ವಿಧಾನಗಳು, ಪರಿಸರವನ್ನು ಉತ್ತಮ ಪಡಿಸುವಲ್ಲಿ ಶಿಕ್ಷಕರ ಮಹತ್ವದ ಅಂಶಗಳು ಈ ಕಾರ್ಯಾಗಾರದಲ್ಲಿದ್ದ ವಿಜ್ಞಾನ ಶಿಕ್ಷಕರ ಮನದಲ್ಲಿ ಸ್ಪಷ್ಟವಾಗಿ ಮೂಡಿದವು. ವಿಜ್ಞಾನ ಸಂವಹನ ಕಾರ್ಯಗಾರ ಹೇಗಿರಬೇಕು ಎನ್ನುವುದಕ್ಕೆ ಇದೊಂದು ಮಾದರಿ ಎನ್ನಬಹುದು.

**– ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು, ಹಗರಿಬೊಮ್ಮನಹಳ್ಳಿ,
**ಮೊ:– 9341444865**

# ಬಾಲ್ಯವಿವಾಹ: ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲು

**ಹಂಪಿ ಟೈಮ್ಸ್ ಕೊಪ್ಪಳ**
ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಮಾಲಗಿತ್ತಿ ಗ್ರಾಮದ ಅಪ್ರಾಪ್ತ ಬಾಲಕಿಯ ಜೊತೆ ಯಲಬುರ್ಗಾ ತಾಲ್ಲೂಕಿನ ಸಂಗನಾಳ ಗ್ರಾಮದ ವ್ಯಕ್ತಿವೊಬ್ಬರೊಂದಿಗೆ ಸಂಗನಾಳ ಗ್ರಾಮದಲ್ಲಿ ಜನವರಿ 01 ರಂದು ಬಾಲ್ಯವಿವಾಹ ಮಾಡಿದ ಹಿನ್ನೆಲೆಯಲ್ಲಿ ಸಂಬಂಧಿಸಿದವರ ವಿರುದ್ಧ ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಜ.01 ರಂದು ಬಾಲ್ಯ ವಿವಾಹ ಮಾಡುತ್ತಿರುವ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ಸಹಾಯವಾಣಿ–1098/112 ಗೆ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಯಲಬುರ್ಗಾ ಅಂಗನವಾಡಿ ಮೇಲ್ವಿಚಾರಕಿಯರು, ಸಂಗನಾಳ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ–1098 ಮತ್ತು 112 ಹಾಗೂ ಪೋಲಿಸ್ ಸಿಬ್ಬಂದಿಯೊಂದಿಗೆ ಸಂಗನಾಳ ಗ್ರಾಮಕ್ಕೆ ತೆರಳಿ ಮದುವೆಯನ್ನು ಮಾಡಬಾರದು ಎಂದು ತಿಳಿಸಿ ಹೇಳಿದಾಗ್ಯೂ ಸಹ ಕೇಳದೆ ಬಾಲಕಿಯ ಬಾಲ್ಯವಿವಾಹವನ್ನು ನೆರವೇರಿಸಿರುತ್ತಾರೆ.

ಆದ್ದರಿಂದ ಬಾಲಕಿಯೊಂದಿಗೆ ಬಾಲ್ಯವಿವಾಹ ಮಾಡಿಕೊಂಡ ವ್ಯಕ್ತಿಯನ್ನು, ಬಾಲ್ಯವಿವಾಹ ನೆರವೇರಿಸಿದ ಬಾಲಕಿಯ ತಂದೆ, ತಾಯಿ, ವರನ ತಂದೆ, ಬಾಲ್ಯವಿವಾಹ ನೆರವೇರಿಸಿದ ಪೂಜಾರಿಗಳು, ಮದುವೆಗೆ ಪೆಂಡಾಲ ಹಾಕಿದ ವ್ಯಕ್ತಿ ಹಾಗೂ ಮದುವೆಯ ಆಮಂತ್ರಣ ಪತ್ರಿಕೆ ಮುದ್ರಿಸಿದ ಪ್ರಿಂಟರ್ಸ ಮಾಲೀಕನ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ–2006ರನ್ವಯ ಸೆಕ್ಷನ್ 9, 10, 11 ರಡಿ 0002/2024, ಸಂಗನಾಳ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.





Pure delight in every bite. Savour the freshness of real fruit!

freshies fruit icecreams

/freshiesicecreams

Visit us today!

#9, ISR Road, Beside KLS Hospital, Near Amedkar Circle, Hosapete

Mob: 7036030603

Locate us:


# ಹಂಪಿ ಉತ್ಸವ ಸಿದ್ಧತೆಗೆ ಸ್ಥಳ ಪರಿಶೀಲನೆ

**ಹಂಪಿ ಟೈಮ್ಸ್ ಹೊಸಪೇಟೆ:**

ಹಂಪಿ ಉತ್ಸವಕ್ಕೆ ದಿನಗಣನೆ ಆರಂಭವಾದ ಬೆನ್ನಲ್ಲೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಮಂಗಳವಾರ ಹಂಪಿಯಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಹಂಪಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ. ವಿಜಯನಗರ ವೈಭವವನ್ನು ಪ್ರತಿಬಿಂಬಿಸುವ ತುಂಗಾ ಆರತಿ, ಹಂಪಿ ಬೈಸ್ಕೈ, ಹಂಪಿ ಬೈ ನೈಟ್ ಈಬಾರಿಯೂ ಆಯೋಜಿಸಲಾಗುವುದು. ಉತ್ಸವದಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗುತ್ತದೆ. ಕುಸ್ತಿ ಸ್ಪರ್ಧೆ, ಮೆಹಂದಿ, ರಂಗೋಲಿ ಸ್ಪರ್ಧೆ, ಕರಕುಶಲ ವಸ್ತುಗಳ ಪ್ರದರ್ಶನ, ಫಲಪುಷ್ಪ ಪ್ರದರ್ಶನ, ದೇಸಿ ಆಹಾರ, ಶಿಲ್ಪಕಲಾ ಶಿಬಿರ, ಚಿತ್ರಕಲಾ ಶಿಬಿರ, ಫೋಟೋ ಸ್ಪರ್ಧೆ, ಮಹಿಳೆಯರಿಗೆ ಸಂಬಂಧಿಸಿದ ವಿವಿಧ ಸ್ಪರ್ಧೆಗಳ ಜತೆಯಲ್ಲಿ ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಗತ್ಯ ವಿವರ



ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಾರಿ ನಾಲ್ಕು ವೇದಿಕೆಗಳನ್ನು ನಿರ್ಮಿಸಲಾಗುವುದು. ಗಾತ್ರಿಪೀಠ ವೇದಿಕೆ, ಎದುರು ಬಸವಣ್ಣ ಮಂಟಪ. ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ, ಸಾಸಿವೆಕಾಳು ಗಣಪತಿ ಸ್ಮಾರಕ, ಆನೆಲಾಯ ಸ್ಮಾರಕ ಹಾಗೂ ಈ ಹಿಂದೆ ನಡೆದಿದ್ದ ಕಾರ್ಯಕ್ರಮಗಳ ಸ್ಥಳಗಳಿಗೆ ಭೇಟಿ ನೀಡಿದರು. ಅದ್ಧೂರಿ ಹಂಪಿ ಉತ್ಸವಕ್ಕೆ ಏನೂ ಕೊರತೆಯಾಗದಂತೆ ನಿಗಾವಹಿಸಬೇಕು. ಗೊಂದಲಗಳಿದ್ದರೆ ಕೂಡಲೇ ಮಾತನಾಡಿ ಪರಿಹಾರ ಕಂಡುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಫೆ.2,3 ಮತ್ತು 4ರಂದು ನಡೆಯುವ ಹಂಪಿ ಉತ್ಸವಕ್ಕೆ ಸಾರಿಗೆ ನಿಲುಗಡೆಗೆ ಅಗತ್ಯ ಪಾರ್ಕಿಂಗ್ ಸ್ಥಳಗಳ ಪರಿಶೀಲನೆ ನಡೆಯಿತು. ಎಸ್ಪಿ ಬಿ.ಎಲ್.ಶ್ರೀಹರಿಬಾಬು, ಅಪರಜಿಲ್ಲಾಧಿಕಾರಿ ಜಿ.ಅನುರಾಧ, ಸಹಾಯಕ ಆಯುಕ್ತ ಎನ್.ಮೊಹಮ್ಮದ್ ಅಲಿ ಅಕ್ರಂ ಶಾ, ಕೃಷಿ ಜಂಟಿ ನಿರ್ದೇಶಕ ಶರಣಪ್ಪ ಮುದುಗಲ್ ಇತರರಿದ್ದರು.

## ಮೈಕ್ರೋ ನ್ಯೂಸ್

### ಭಾರತಿ ಎಸ್.ವೀರಾಪೂರಗೆ ಪಿಎಚ್‌ಡಿ ಪದವಿ ಪ್ರದಾನ

**ಹಂಪಿ ಟೈಮ್ಸ್ ಬಳ್ಳಾರಿ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿನಿ ಭಾರತಿ ಎಸ್.ವೀರಾಪೂರ ಅವರಿಗೆ ಪಿಹೆಚ್‌ಡಿ ಪದವಿ ಲಭಿಸಿದೆ.

ವಿವಿಯ ವಿಜ್ಞಾನ ನಿಕಾಯದ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಪಕರಾದ (ನಿವೃತಿ) ಡಾ.ಕೆ. ಎಮ್.ಬಸವರಾಜ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ "ಸ್ಟಡೀಸ್ ಆನ್ ಸಿಂತಸಿಸ್ ಅಂಡ್ ಕ್ಯಾರಕ್ಟರೈಸೇಷನ್‌ನ ಆಫ್ ಫಾರ್ಮಕಲಾಜಿಕಲಿ ಪೊಂಟೆಂಟ್ ಆಕ್ಸಿಜನ್ ಅಂಡ್ ನೈಟ್ರೋಜನ್ ಹೆಟಿರೋಸೈಕ್ಲಿಕ್ ಕಾಂಪೌಂಡ್ಸ್" ಎಂಬ ಮಹಾಪ್ರಬಂಧ ಮಂಡಿಸಿದ್ದಕ್ಕೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯು ಪಿಎಚ್‌ಡಿ ಪದವಿ ನೀಡಿದೆ.

### ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳ ನವೀಕರಣ

**ಹಂಪಿ ಟೈಮ್ಸ್ ಬಳ್ಳಾರಿ**

2024ನೇ ಸಾಲಿಗಾಗಿ ಜ.01 ರಿಂದ ಡಿ.31 ರವರೆಗೆ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳನ್ನು ಮಾನ್ಯತೆ ಇರುವಂತೆ ಫಲಾನುಭವಿಗಳು ನವೀಕರಣ ಮಾಡಿಕೊಳ್ಳಬೇಕು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ಅವರು ತಿಳಿಸಿದ್ದಾರೆ.

ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳನ್ನು ನವೀಕರಣ ಮಾಡಿಕೊಳ್ಳಲು ಸಾಕಷ್ಟು ಕಾಲಮಿತಿ ನೀಡುವ ಉದ್ದೇಶದಿಂದ 2023 ನೇ ಸಾಲಿನಲ್ಲಿ ವಿತರಿಸಲಾಗಿರುವ ಅಂದರೆ 2023ರ ಡಿ.31ರ ವರೆಗೆ ಮಾನ್ಯತೆ ಇರುವ ವಿಕಲಚೇತನರ ಪಾಸ್‌ಗಳನ್ನು ನವೀಕರಿಸದೇ 2024ರ ಫೆ.29ರ ವರೆಗೆ ಮಾನ್ಯತೆ ನೀಡಲಾಗಿದ್ದು, ಆ ದಿನಾಂಕದವರೆಗೆ ವಿಕಲಚೇತನರು ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.

2023ನೇ ಸಾಲಿನಲ್ಲಿ ವಿತರಣೆ ಮಾಡಿದ ವಿಕಲಚೇತನರ ರಿಯಾಯಿತಿ ದರದ ಬಸ್ ಪಾಸ್‌ಗಳನ್ನು 05 ಜನವರಿ 2024 ರಿಂದ 29 ಫೆಬ್ರವರಿ 2024 ರ ಒಳಗೆ ಎಲ್ಲಾ ಸೂಕ್ತ ದಾಖಲಾತಿಗಳೊಂದಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ, ಪಾಸ್‌ಶುಲ್ಕ ರೂ.660 ಗಳನ್ನು ಪಾವತಿಸಿ, ಬಳ್ಳಾರಿ ಕೇಂದ್ರೀಯ ಬಸ್ ನಿಲ್ದಾಣ ಹಾಗೂ ಸಿರುಗುಪ್ಪ, ಕುರುಗೋಡು, ಸಂಡೂರು ಘಟಕಗಳಲ್ಲಿ ವಿಕಲಚೇತನ ಫಲಾನುಭವಿಗಳು ನವೀಕರಣ ಮಾಡಿಸಿಕೊಳ್ಳಬಹುದಾಗಿದೆ.

ಫೆ.29 ರ ನಂತರ ಬರುವ ಬಸ್‌ಪಾಸ್‌ಗಳನ್ನು ನವೀಕರಿಸಲಾಗುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಂತಿಯಿಂದ ಜಾತ್ರೋತ್ಸವ ನಡೆಯಲಿ

### ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಸೂಚನೆ । ಜಾತ್ರಾ ಪೂರ್ವ ಭಾವಿ ಸಭೆ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವತೆ ಕೆಂಗಳ ದುರ್ಗಮ್ಮದೇವಿಯ ಜಾತ್ರಾಮಹೋತ್ಸವ ಮತ್ತು ಹಬ್ಬವನ್ನು ದೈವಸ್ಥರು ಕಾನೂನು ಚೌಕಟ್ಟಿನೊಳಗೆ, ಶಾಂತತೆ ಕಾಯ್ದುಕೊಂಡು, ಸಂಭ್ರಮದಿಂದ ಧಾರ್ಮಿಕ ಕಾರ್ಯಕ್ರಮ ಗಳನ್ನು ನಡೆಸಿ ಎಂದು ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಸೂಚಿಸಿದರು.

ಮಂಗಳವಾರ ದೇವಸ್ಥಾನ ಮುಂಭಾಗದಲ್ಲಿ, ಜಾತ್ರೋತ್ಸವಕ್ಕೆ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಸೇರಿ ದೈವಸ್ಥರ ಸಮುಖದಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ಮಾತನಾಡಿದರು. ಸಿಪಿಐ ಟಿ.ವೆಂಕಟಸ್ವಾಮಿ. ಕೆಲ ಕಿಡಿಕೇಡಿಗಳ ಹುಚ್ಚಾಟಕ್ಕೆ ಇತ್ತೀಚೆಗೆ ಧಾರ್ಮಿಕ ಕಾರ್ಯಕ್ರಮಗಳಿಗೆ ಕಳಂಕ ಬಂದೊದಗುತ್ತಿವೆ, ಪ್ರಜ್ಞಾವಂತ ಯುವಕರು ಈ ಬಗ್ಗೆ ಎಚ್ಚರಿಕೆಯಿಂದಿದ್ದು, ಜ–16 ರಿಂದ 18ರ ವರೆಗೆ ನಡೆಯುವ ಜಾತ್ರಾಮಹೋತ್ಸವವು ಇಲ್ಲಿ ವಿಜೃಂಭಣೆಯಾಗಿ ನಡೆಸಿ ಕಾನೂನಿನ ಸುವ್ಯವಸ್ಥೆಯೊಳಗೆ ಅನ್ಯರಿಗೆ ಮಾದರಿಯಾಗುವಂತೆ ನೋಡಿಕೊಳ್ಳಬೇಕೆಂದರು.

ಪಿಎಸ್‌ಐ ಗೀತಾಂಜಲಿ ಸಿಂಧೆ ಮಾತನಾಡಿ,



ಕಾನೂನು ಪರಿಪಾಲನೆ ಕುರಿತು ಇಲಾಖೆ ಮೇಲಾಧಿಕಾರಿಗಳು ಸವಿಸ್ತಾರವಾಗಿ ತಿಳಿಸಿದ್ದಾರೆ, ಒಂದು ವೇಳೆ ಧಿಕ್ಕರಿಸಿ ಕಾನೂನು ಉಲ್ಲಂಘಿಸಿದರೆ ನಿರ್ದಾಕ್ಷಿಣ್ಯವಾಗಿ ಕೇಸ್ ದಾಖಲಿಸಬೇಕಾಗುತ್ತೆ ಎಂದು ಖಡಕ್ ಎಚ್ಚರಿಕೆ ನೀಡಿದರು.

ಪ.ಪಂ. ಮುಖ್ಯಾಧಿಕಾರಿ ಎ.ನಸರುಲ್ಲಾ ಅವರು ಮಾತನಾಡಿ, ಸ್ವಚ್ಛತೆ ಮತ್ತು ಕುಡಿಯುವ ನೀರು ಸೇರಿದಂತೆ ಪ.ಪಂ ಇತರೆ ಕಾರ್ಯಗಳನ್ನು ಜಾತ್ರೋತ್ಸವದಲ್ಲಿ ಅಚ್ಚುಕಟ್ಟಾಗಿ ನೆರವೇರಿಸಿ ಕೊಡುವುದಾಗಿ ಭರವಸೆ ನೀಡಿದರು ಹಾಗೆ ಕೋವೀಡ್ ಹಿನ್ನೆಲೆ ಜಾತ್ರೋತ್ಸವದಲ್ಲಿ ನಿಯಮಗಳನ್ನು ಪಾಲಿಸುವಂತೆ ಹಾಗೂ ಬ್ಯಾನರ್ ಅಳವಡಿಸಲು ಪರವಾನಗಿ ಪಡೆಯುವಂತೆ ಹೇಳಿದರು.

ಕಂದಾಯ ಇಲಾಖೆ ಉಪ ತಹಶಿಲ್ದಾರ ಅನ್ನದಾನೇಶ್, ಜೆಸ್ಕಾಂ ಇಲಾಖೆ ವೆಂಕಟೇಶ, ವಾಲ್ಮೀಕಿ ಸಮುದಾಯದ ಮುಖಂಡ ಪಕ್ಕೀರಪ್ಪ ಮಾತನಾಡಿದರು. ಮುಖಂಡರು ಕೆಂಚಪ್ಪ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಭೆಯಲ್ಲಿ ಪ.ಪಂ ಆರೋಗ್ಯ ನಿರೀಕ್ಷಕಿ ಅನುಷಾ,ಕೆಇಬಿ ಸಿಬ್ಬಂದಿಗಳು ಮತ್ತು ಪೋಲಿಸ್ ಇಲಾಖೆ ಸಿಬ್ಬಂದಿಗಳು ಹಾಗೂ ಸಮಸ್ತ ವಾಲ್ಮೀಕಿ ಸಮುದಾಯದ ಮುಖಂಡರು ಹಾಗೂ ಯುವಕರು ಹಾಜರಿದ್ದರು.

## ಮಾರುಕಟ್ಟೆಗೆ ಮೇಳಗಳು ಸಹಕಾರಿ

### ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಆರ್.ಲಿಂಗರಾಜು ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಆರ್ಥಿಕ ಸ್ವಾವಲಂಬನೆಗಾಗಿ ಸ್ಥಳೀಯವಾಗಿ ಉತ್ಪಾದಿಸಿದ ವಸ್ತುಗಳಿಗೆ ನೇರ ಮಾರುಕಟ್ಟೆ ಸೌಲಭ್ಯ ಒದಗಿಸಲು ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಸಹಕಾರಿಯಾಗಿದೆ ಎಂದು ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಆರ್.ಲಿಂಗರಾಜು ಅವರು ಹೇಳಿದರು.

ನವದೆಹಲಿಯ ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಜವಳಿ ಮಂತ್ರಾಲಯ, ಬೆಂಗಳೂರು ಕೈಮಗ್ಗ ಮತ್ತು ಜವಳಿ ಇಲಾಖೆಯ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿ,(ಕಾವೇರಿ ಹ್ಯಾಂಡಲೂಮ್ಸ್), ಜಿಲ್ಲಾ ಪಂಚಾಯತ್ ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಗಡಿಗಿ ಚೆನ್ನಪ್ಪ ವೃತ್ತದ ಬಳಿಯ ಗಾಂಧಿ ಭವನದಲ್ಲಿ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಜ.02ರಿಂದ ಜ.15ರವರೆಗೆ (14 ದಿನಗಳವರೆಗೆ) ಏರ್ಪಡಿಸಲಾದ ರಾಜ್ಯ ಮಟ್ಟದ ವಿಶೇಷ ಕೈಮಗ್ಗ ಮೇಳ ವಸ್ತ್ರಸಿರಿ–2024 ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು.

ರೈತರು ಮತ್ತು ನೇಕಾರರು ಇಬ್ಬರೂ ಬಡವರ್ಗದವರಾಗಿದ್ದೂ, ಸ್ವಾವಲಂಬಿ ಬದುಕುಗಾಗಿ ತಾವೇ ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡುವುದು ಅತ್ಯಂತ ಶ್ಲಾಘನೀಯ ಕೆಲಸ. ಇದರಿಂದ ಅನೇಕ ಉತ್ಪಾದಕರಿಗೆ ನೇರವಾಗಿ ಮಾರುಕಟ್ಟೆಯಲ್ಲಿ ಮತ್ತು ಉದ್ಯಮದಲ್ಲಿ ತೊಡಗಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಿದರು.

ಜಿಪಂ ಕೈಮಗ್ಗ ಮತ್ತು ಜವಳಿ ಇಲಾಖೆಯ



ಉಪನಿರ್ದೇಶಕ ಬಿ.ವಿಠಲ ರಾಜು ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಗರದಲ್ಲಿ ಜ.02ರಿಂದ 15ರ ವರೆಗೆ 14 ದಿನಗಳ ವರೆಗೆ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಇರಲಿದೆ. ಸಾರ್ವಜನಿಕರು ಮತ್ತು ನಗರವಾಸಿಗಳು 'ಕೈ ಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ'ದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಮೇಳದಲ್ಲಿ ಉತ್ತಮ ವಿವಿಧ ನಮೂನೆಯ ಬಣ್ಣ ಬಣ್ಣದ ಹತ್ತಿ ಮತ್ತು ರೇಷ್ಮೆ ಸೀರೆ, ಟವೆಲ್, ಗುಡಾರ, ಲುಂಗಿ, ಬೆಡ್‌ಶೀಟ್, ಮೊಳಕಾಲ್ಮೂರು ಸೀರೆ, ಗದ್ವಾಲ್ ಸೀರೆ, ಕೈವಸ್ತ್ರ, ಕಂಬಳಿ, ಉಣ್ಣೆ ರಗ್ಗು, ಡೋರ್ ಮ್ಯಾಟ್, ವಾಲ್ ಹ್ಯಾಂಗಿಗ್ಸ್, ಡ್ರೆಸ್ ಮೆಟಿರಿಯಲ್, ಖಾದಿ ಬಟ್ಟೆಗಳು, ಸಂಡೂರಿನ ಲಮಾಣಿ ಕಸೂತಿ ಉತ್ಪನ್ನಗಳು ಲಭ್ಯವಿರಲಿವೆ. ಕೈಮಗ್ಗ ನೇಕಾರರಿಂದ ನೇರವಾಗಿ ಗ್ರಾಹಕರಿಗೆ ಶೇ.20 ರಷ್ಟು ರಿಯಾಯಿತಿ ದರದಲ್ಲಿ ಸಿಗಲಿವೆ ಎಂದರು.

ಮೇಳದಲ್ಲಿ ಸ್ಥಳೀಯ, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಒಟ್ಟು 61 ಮಳಿಗೆಗಳನ್ನು ಹಾಕಲಾಗಿತ್ತು.

ನಂತರದಲ್ಲಿ ಮಹಾನಗರ ಪಾಲಿಕೆಯ ಉಪಮಹಾಪೌರರಾದ ಬಿ.ಜಾನಕಿ ಅವರು ಮಳಿಗೆಗಳನ್ನು ಸಾಂಕೇತಿಕವಾಗಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಕಾವೇರಿ ಹ್ಯಾಂಡ್‌ಲೂಮ್ಸ್‌ನ ಅಧ್ಯಕ್ಷರಾದ ಬಿ.ಜೆ.ಗಣೇಶ್, ಕಾವೇರಿ ಹ್ಯಾಂಡ್‌ಲೂಮ್ಸ್‌ನ ನಿರ್ದೇಶಕ ಹಾಗೂ ಮಾಜಿ ಅಧ್ಯಕ್ಷರಾದ ಎನ್.ವಿರೂಪಾಕ್ಷ, ಉತ್ತರ ವಲಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕ ವೀರೇಶ್ ಎಸ್.ಢವಳೆ, ಜವಳಿ ಮಂತ್ರಾಲಯದ ನೇಕಾರರ ಸೇವಾ ಕೇಂದ್ರದ ಸಹಾಯಕ ನಿರ್ದೇಶಕ ಮಾರಿಮುತ್ತು, ಸಹಾಯಕ ನಿರ್ದೇಶಕರಾದ ಮಹಾಂತೇಶ್ ಕಂಚಿನ ಮಠ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## 24/7 ಸಹಾಯವಾಣಿ ಕೇಂದ್ರ ಪ್ರಾರಂಭ

**ಹಂಪಿ ಟೈಮ್ಸ್ ಬಳ್ಳಾರಿ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಳ್ಳಾರಿ ವಿಭಾಗ ವ್ಯಾಪ್ತಿಯಲ್ಲಿ ಸಾರಿಗೆಸೌಲಭ್ಯಕ್ಕೆಸಂಬಂಧಿಸಿದಂತೆಸಲಹೆಹಾಗೂಕುಂದುಕೊರತೆಗಳನ್ನು ಸ್ವೀಕರಿಸಿ, ತ್ವರಿತವಾಗಿ ಸ್ಪಂದಿಸಲು ಅನುಕೂಲವಾಗುವ ದೃಷ್ಟಿಯಿಂದ 24*7 ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಳ್ಳಾರಿ ವಿಭಾಗವು ಸಾರ್ವಜನಿಕ ಪ್ರಯಾಣಿಕರಿಗೆ ಸುಗಮ ಹಾಗೂ ಸುವ್ಯವಸ್ಥಿತವಾದ ಸಾರಿಗೆ ಸೌಕರ್ಯವನ್ನು ಒದಗಿಸುವ ಧ್ಯೇಯ ಹೊಂದಿದೆ.

ಸಾರ್ವಜನಿಕರು ತಮ್ಮ ಸಲಹೆ, ಕುಂದುಕೊರತೆಗಳಿದ್ದಲ್ಲಿ ಸಹಾಯವಾಣಿ ಸಂಖ್ಯೆ 6366423885 ಗೆ ಕರೆ ಮಾಡಬಹುದು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ತಿಳಿಸಿದ್ದಾರೆ.

## ದಾಖಲಾತಿ ಹೆಚ್ಚಳಕ್ಕೆ ಸೂಚನೆ ಕಾಲೇಜುಗಳಿಗೆ ಉಪನಿರ್ದೇಶಕರ ಅನಿರೀಕ್ಷಿತ ದಿಢೀರ್ ಭೇಟಿ, ಸಭೆ

**ಹಂಪಿ ಟೈಮ್ಸ್ ಹರಪನಹಳ್ಳಿ:**

ತಾಲ್ಲೂಕಿನ ಲಕ್ಷ್ಮೀಪುರ, ಉಚ್ಚಂಗಿದುರ್ಗ, ಮಾದಿಹಳ್ಳಿ, ಚಿಗಟೇರಿ, ಸಾಸ್ವೆಹಳ್ಳಿ, ಹಲುವಾಗಲು ಹಾಗೂ ಸಿಂಗ್ರಳ್ಳಿ ಗ್ರಾಮಗಳ ಸರ್ಕಾರಿ, ಅನುದಾನಿತ, ಅನುದಾನರಹಿತ ಒಟ್ಟು 13 ಕಾಲೇಜುಗಳಿಗೆ ಸೋಮವಾರ ದಂದು ಬಳ್ಳಾರಿ ವಿಜಯನಗರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಟಿ. ಪಾಲಾಕ್ಷ ಅವರು ಅನಿರೀಕ್ಷಿತ ಭೇಟಿ ನೀಡಿ ಪ್ರಾಚಾರ್ಯರು, ಉಪನ್ಯಾಸಕರ ಸಭೆ ನಡೆಸಿ ಪಿಯುಸಿ ಫಲಿತಾಂಶ ಸುಧಾರಣೆಗೆ ಶ್ರಮಿಸಲು ಕರೆ ನೀಡಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಇಳಿಮುಖವಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿ ದಾಖಲಾತಿ ಹೆಚ್ಚಿಸಲು ಕ್ರಮ ವಹಿಸಲು ತಿಳಿಸಿದರು.

ಪರೀಕ್ಷೆ ಸಮೀಪಿಸುತ್ತಿದ್ದು ವಿದ್ಯಾರ್ಥಿಗಳ ಹಾಜರಾತಿಗಾಗಿ ನಿಗಾ ವಹಿಸಲು ಪೋಷಕರೊಂದಿಗೆ ಸತತ ಸಂಪರ್ಕ ಹೊಂದಲು ಹಾಗೂ ಗ್ರಾಮೀಣ ವಿದ್ಯಾರ್ಥಿಗಳು ಹೊಲಮನೆ ಕೆಲಸಗಳಲ್ಲೇ ಹೆಚ್ಚು ಭಾಗವಹಿಸುವುದು ಕಂಡು ಬಂದಿದ್ದು ಪೋಷಕರ ಮನವೊಲಿಸಲು ತಿಳಿಸಿದರು.

ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಪಿಯುಸಿ ವಿದ್ಯಾರ್ಥಿಗಳ ಭವಿಷ್ಯದ ಮಹತ್ವದ ಘಟ್ಟವಾಗಿದ್ದು ತರಗತಿಗಳಿಗೆ ಗೈರು ಹಾಜರಾಗದಂತೆ ಮೊಬೈಲ್ ಬಳಸದಂತೆ, ಟಿವಿ ನೋಡದಂತೆ ಇದ್ದು ಸತತವಾಗಿ ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.

ಲಕ್ಷ್ಮೀಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಪ್ರಯೋಗಾಲಯದ ಕಟ್ಟಡವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ, ಎಲ್ಲಾ ಕಾಲೇಜುಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ತಿಳಿಸಿದರು.

ಇಂಗ್ಲೀಷ್ ಮತ್ತು ವಿಜ್ಞಾನ ವಿಷಯಗಳಿಗೆ ಪುನರಾವರ್ತಿತ ತರಗತಿ ನಡೆಸಲು ಹೇಳಿದರು. ವಿದ್ಯಾರ್ಥಿಗಳಿಗೆ ಸುಮಾರು 50000/–ರೂಗಳ ಸಿಇಟಿ, ನೀಟ್ ತರಬೇತಿಗಾಗಿ ಪುಸ್ತಕಗಳನ್ನು ವಿತರಿಸುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಪ್ರಭಾರಿ ಉಪನಿರ್ದೇಶಕರಾದ ನಾಗರಾಜ್ ಹವಾಲ್ದಾರ, ಪ್ರಾಚಾರ್ಯರಾದ ತೊಪ್ಪಲ್ ಹಾಲೇಶ್, ಹೆಚ್.ರಾಮಚಂದ್ರಪ್ಪ, ವೀರಣ್ಣ ಚಳಗೇರಿ, ರಾಮಪ್ಪ ಕಲ್ಯಾಣದವರ್, ಆರ್. ಕುಮಾರನಾಯ್ಕ, ಪ್ರಸನ್ನ ಕುಮಾರ್, ಮಲ್ಲಿಕಾರ್ಜುನ, ಅರುಣ್ ಕುಮಾರ್, ಪರುಶುರಾಮ್, ಮಂಜುನಾಥ್, ಸಿದ್ದೇಶ್, ಸುರೇಶ್, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.


**AFFIDAVIT**

I, **DEEPAK KUMAR JAIN** S/o Gorakh Chand Jain, Aged 33 years, Hindu R/o House No.474/1, 21st Ward, Near Vijaya Theatre, Main Bazar, Hospet-583201., Vijayanagara Dist.

My name is in Adhar Card as DEEPAK KUMAR JAIN, and in Bank account my name is as **DEEPAK KUMAR** the above both names are same and belongs to me only. vide affidavit dated 02-01-2024 before Notary Chandrashekhar P. Yalagod at Hosapete-583201


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA